Rare B.
1058
ಗ್ರಂಥಾಲಯ
ಕ್ರಮಾಂಕ : 011211
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ.
1952

ಕರ್ಮ ರಹಸ್ಯ

ಸ್ವಾಮಿ ವಿವೇಕಾನಂದ

ಪ್ರಕಾಶಕರು

ಶ್ರೀ ರಾಮಕೃಷ್ಣಾಶ್ರಮ

ಮೈಸೂರು

ಬೆಲೆ: ೦—೪—೦

ಓಂ ನಮಃ ಶಿವಾಯ

ಕರ್ಮ ರಹಸ್ಯ

ಕನ್ನಡ ವಿಶ್ವವಿದ್ಯಾಲಯ ಗ್ರಂಥಾಲಯ

ಸ್ವಾಮಿ ವಿವೇಕಾನಂದ

ಓಂ ನಮೋ ಭಗವತೇ ರಾಮಕೃಷ್ಣಾಯ.

ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಮೈಸೂರು.

ಬಿ. ನಾ. ಬಡಾವ.

ಮೊದಲನೆಯ ಮುದ್ರಣ ೧೯೪೯

ಎರಡನೆಯ ಮುದ್ರಣ ೧೯೫೨

ವಿಶ್ವವಿದ್ಯಾಲಯದ ಪುಸ್ತಕ ಭಂಡಾರ

ಎಲ್ಲಾ ಹಕ್ಕುಗಳನ್ನೂ ಕಾದಿರಿಸಿದೆ.

011211

ವಿಶ್ವ ವಿದ್ಯಾಲಯ

ಗ್ರಂಥಾಲಯ

ಹಂಪಿ

ಪ್ರಕಾಶಕರು :

ಸ್ವಾಮಿ ಶಾಂಭವಾನಂದ,

ಶ್ರೀ ರಾಮಕೃಷ್ಣಾಶ್ರಮ, ಮೈಸೂರು.

ಮುದ್ರಕರು :

ಹಿಂದೂಸ್ಥಾನ್ ಪ್ರೆಸ್,

ಮೈಸೂರು.

ಕರ್ಮರಹಸ್ಯ

ನನ್ನ ಜೀವನದಲ್ಲಿ ಕಲಿತ ಅತ್ಯುತ್ತಮ ನೀತಿಯೊಂದು, ಗುರಿ ಎಡೆಗೆ ಕೊಡುವ ಪ್ರಾಮುಖ್ಯತೆಯನ್ನೇ ದಾರಿಗೂ ಕೊಡಬೇಕೆನ್ನುವುದು. ನಾನು ಯಾರಿಂದ ಇದನ್ನು ಕಲಿತೆನೋ ಆತನೊಬ್ಬ ಮಹಾನುಭಾವ. ಅವರ ಇಡೀ ಜೀವನವೇ ಈ ಸಿದ್ಧಾಂತಕ್ಕೆ ಒಂದು ಉದಾಹರಣೆಯಾಗಿತ್ತು. ಈ ಒಂದು ಮಹಾಸಿದ್ಧಾಂತದಿಂದ ನಾನು ಹಲವು ಒಳ್ಳೆ ನೀತಿಗಳನ್ನು ಅಂದಿನಿಂದ ಕಲಿಯುತ್ತಿರುವೆನು. ಗುರಿಗೆ ಕೊಡುವಷ್ಟು ಗಮನವನ್ನೇ ದಾರಿಗೂ ಕೊಡುವುದರಲ್ಲಿ ಜಯದ ರಹಸ್ಯವೆಲ್ಲ ಇರುವಂತೆ ನನಗೆ ತೋರುವುದು.

ಜೀವನದಲ್ಲಿ ನಮ್ಮ ಒಂದು ದೊಡ್ಡ ಕೊರತೆಯೇ, ಗುರಿ ಎಡೆಗೆ ನಾವು ಹೆಚ್ಚು ಆಕರ್ಷಿತರಾಗುವೆವು, ಗುರಿ ನಮ್ಮನ್ನು ಮೋಹಪರವಶರನ್ನಾಗಿ ಮಾಡುವುದು, ಮುಗ್ಧರನ್ನಾಗಿ ಮಾಡುವುದು, ಅದೇ ನಮ್ಮ ಮನಸ್ಸನ್ನೆಲ್ಲಾ ವ್ಯಾಪಿಸುವುದು. ಅದನ್ನು ಪಡೆಯುವ ವಿವರಗಳು ಮರತೇ ಹೋಗುವುವು.

ಆದರೆ ನಮ್ಮ ಜೀವನದಲ್ಲಿ ಯಾವಾಗಲಾದರೂ ಸೋಲು ಬಂದಾಗ ಅದನ್ನು ಕೂಲಂಕಷವಾಗಿ ಕುರಿತು ವಿಚಾರ ಮಾಡಿದರೆ ನೂರಕ್ಕೆ ತೊಂಬತ್ತೊಂಬತ್ತು ಕಡೆ ಅದಕ್ಕೆ ಕಾರಣ ದಾರಿ ಎಡೆಗೆ ಗಮನ ಕೊಡದೆ ಇದ್ದುದು ಎಂದು ಗೊತ್ತಾಗುವುದು. ಅದನ್ನು ಪೂರ್ಣಗೊಳಿಸುವ ಕಡೆಗೆ, ಮಾರ್ಗವನ್ನು ಹೇಗೆ ಸುಗಮನ ಮಾಡಬೇಕೆಂಬುದರ ಕಡೆಗೆ, ಸಾಕಾದಷ್ಟು ಗಮನ ನಮಗೆ ಆವಶ್ಯಕವಾಗಿರುವುದು. ಮಾರ್ಗ ಸರಿಯಾಗಿದ್ದರೆ ಗುರಿ ಸಿದ್ಧಿಸಲೇ ಬೇಕು. ಕಾರಣ, ಒಂದು ಪರಿಣಾಮಕ್ಕೆ ಹೇತು ಎಂಬುದನ್ನು ನಾವು ಮರೆಯುವೆವು; ಪರಿಣಾಮ ತನಗೆ ತಾನೆ ಬರಲಾರದು. ಕಾರಣಗಳು ಸರಿಯಾಗಿ, ಯೋಗ್ಯವಾಗಿ ಪ್ರಬಲವಾಗಿಲ್ಲದೆ ಇದ್ದರೆ ಪರಿಣಾಮ ಪ್ರತಿಫಲ ದೊರಕಲಾರದು. ಒಮ್ಮೆ ನಾವು ಆದರ್ಶವನ್ನು ಆರಿಸಿಕೊಂಡು, ಅದನ್ನು ಪಡೆಯುವ ರೀತಿಯನ್ನು ನಿರ್ಧರಿಸಿದಮೇಲೆ ಆದರ್ಶವನ್ನು ಬೇಕಾದರೆ ಸ್ವಲ್ಪ ಮರೆತರೂ ಚಿಂತೆ ಇಲ್ಲ. ಏಕೆಂದರೆ ಅದನ್ನು ಪಡೆಯುವ ಸಾಧನೆ ಪೂರ್ಣವಾದರೆ ಗುರಿ ಅಲ್ಲೇ ಇರುವುದು ಎಂದು ನಮಗೆ ನಿಸ್ಸಂದೇಹವಾಗಿ ಗೊತ್ತಿದೆ. ಅದಕ್ಕೆ ಕಾರಣವಿದ್ದರೆ ಪರಿಣಾಮಕ್ಕೆ ಯಾವ ಒಂದು ತೊಡಕೂ ಇರುವುದಿಲ್ಲ.

ಪರಿಣಾಮ ಬರಲೇ ಬೇಕಾಗಿದೆ. ನಾವು ಸಾಧನವನ್ನು ಗಮನಿಸಿದರೆ, ಸಿದ್ಧಿ ತನ್ನನ್ನು ತಾನೆ ನೋಡಿಕೊಳ್ಳುವುದು. ನಮ್ಮ ಆದರ್ಶ ಸಾಕ್ಷಾತ್ಕಾರ ಸಿದ್ಧಿ. ಅದಕ್ಕೆ ಮಾರ್ಗ ಸಾಧನೆ. ಆದಕಾರಣ ಸಾಧನ ಪ್ರಾಮುಖ್ಯತೆಯೆ, ಜೀವನದ ಅತಿ ದೊಡ್ಡ ರಹಸ್ಯ: ನಾವು ಕರ್ಮ ಮಾಡಬೇಕು. ಎಡೆಬಿಡದೆ ನಮ್ಮ ಶಕ್ತಿಯನ್ನೆಲ್ಲ ಉಪಯೋಗಿಸಿ ಕರ್ಮ ಮಾಡಬೇಕು. ನಾವು ಮಾಡುವ ಕಾರ್ಯ ಏನಾದರೂ ನಮ್ಮ ಇಡೀ ಮನಸ್ಸನ್ನು ಅಲ್ಲಿ ಏಕಾಗ್ರಮಾಡಬೇಕೆಂದು ಗೀತೆಯಲ್ಲಿ ಓದುತ್ತೇವೆ. ಆದರೆ ನಾವು ಅದೇ ಕಾಲದಲ್ಲಿ ಆಸಕ್ತರಾಗಿರಬಾರದು. ಹಾಗೆಂದರೆ, ಕೆಲಸದಿಂದ ನಾವು ಮತ್ತೆ ಯಾವ ಆಕರ್ಷಣಕ್ಕೊಳಗಾಗಿ ದೂರ ಸರಿಯಬಾರದು; ಆದರೂ, ಕೆಲಸವನ್ನು ನಾವು ಇಚ್ಛಿಸಿದಾಗ ಬಿಡಲು ಸಿದ್ಧರಾಗಿರಬೇಕು.

ನಮ್ಮ ಜೀವನವನ್ನು ನಾವು ಪರೀಕ್ಷೆಮಾಡಿಕೊಂಡರೆ, ನಮ್ಮ ದಾರುಣ ದುಃಖಕ್ಕೆ ಕಾರಣ ಇದು ಎಂದು ಗೊತ್ತಾಗುವುದು: ನಾವು ಯಾವುದಾದರೂ ಕಾರ್ಯದಲ್ಲಿ ತತ್ಪರರಾಗುತ್ತೇವೆ. ನಮ್ಮ ಮನಸ್ಸನ್ನೆಲ್ಲ ಅದರಮೇಲೆ ಬಿಡುತ್ತೇವೆ. ಆ ಕೆಲಸ ನೆರವೇರದೆ ಇದ್ದರೆ ಆಗಲೂ ಅದನ್ನು ಬಿಡುವುದಿಲ್ಲ. ಅದರಿಂದ ನಮಗೆ ವ್ಯಥೆಯಾಗುತ್ತಿದೆ ಎಂದು ಗೊತ್ತಿದೆ. ಹೆಚ್ಚುಕಾಲ ಅದರಲ್ಲಿ ಆಸಕ್ತರಾಗಿರುವುದರಿಂದ ದುಃಖ ಮತ್ತೂ ಹೆಚ್ಚಾಗುವುದು ಎಂಬುದೂ ಗೊತ್ತಿದೆ. ಆದರೂ ಅವುಗಳಿಂದ ನಾವು ಬಿಡಿಸಿಕೊಳ್ಳುವುದು ಅಸಾಧ್ಯ. ದುಂಬಿ ಜೇನನ್ನು ಆಸ್ವಾದಿಸಲು ಬಂದು, ಪಾರಾಗಲು ಅಸಾಧ್ಯವಾಯಿತು. ಪುನಃ ಪುನಃ ನಾವು ಅದೇ ಸ್ಥಿತಿಗೆ ಬರುವೆವು. ಇದೇ ಜೀವನದ ರಹಸ್ಯ. ನಾವು ಏತಕ್ಕೆ ಇಲ್ಲಿರುವುದು? ನಾವು ಮಧುವನ್ನು ಕುಡಿಯಲು ಬಂದೆವು. ಆದರೆ ನಮ್ಮ ಕೈಕಾಲುಗಳು ಅದರಲ್ಲಿ ಸಿಕ್ಕಿಕೊಂಡಿರುವುದು ಕಾಣುವುದು. ನಾವು ಹಿಡಿಯುವುದಕ್ಕೆ ಬಂದೆವು. ಆದರೆ ನಾವೇ ಹಿಡಿಯಲ್ಪಟ್ಟಿರುವೆವು. ನಾವು ಆನಂದವನ್ನು ಅನುಭವಿಸುವುದಕ್ಕೆ ಬಂದೆವು. ಆದರೆ ಮತ್ತಾರೊ ನಮ್ಮಿಂದ ಆನಂದವನ್ನು ಅನುಭವಿಸುತ್ತಿರುವರು. ನಾವು ಆಳುವುದಕ್ಕೆ ಬಂದೆವು, ಆದರೆ ಮತ್ತಾರೊ ನಮ್ಮನ್ನು ಆಳುತ್ತಿರುವರು. ನಾವು ಕೆಲಸಮಾಡುವುದಕ್ಕೆ ಬಂದೆವು, ಆದರೆ ಮತ್ತಾರೊ ನಮ್ಮಿಂದ ಮಾಡಿಸುತ್ತಿರುವರು. ಯಾವಾಗಲೂ ನಮಗೆ ಇದು ಕಾಣುವುದು. ನಮ್ಮ ಜೀವನದ ಪ್ರತಿಯೊಂದು ಕಾರ್ಯಕ್ಷೇತ್ರದಲ್ಲಿಯೂ ಇದನ್ನು ನೋಡುತ್ತೇವೆ. ಅನ್ಯರ ಮನಸ್ಸು ನಮ್ಮ

ಮೇಲೆ ಕೆಲಸಮಾಡುತ್ತಿದೆ. ನಾವು ಮತ್ತೊಬ್ಬರ ಮನಸ್ಸಿನ ಮೇಲೆ ಕೆಲಸ ಮಾಡುವುದಕ್ಕೆ ಪ್ರಯತ್ನಿಸುತ್ತಿರುವೆವು. ನಾವು ಈ ಜೀವನದ ಸುಖ ವನ್ನು ಅನುಭವಿಸಬೇಕೆಂದು ಬಯಸುವೆವು. ಇದೇ ನಮ್ಮ ಜೀವನವನ್ನು ನಾಶಮಾಡುವುದು. ಪ್ರಕೃತಿಯಿಂದ ಎಲ್ಲವನ್ನೂ ನಾವು ಬಯಸುವೆವು. ಆದರೆ ಕೊನೆಗೆ ಪ್ರಕೃತಿ ನಮ್ಮಿಂದ ಎಲ್ಲವನ್ನೂ ಅಪಹರಿಸಿ, ಸುಲಿದು ಆಚೆಗೆಸೆಯುವುದು.

ಇದಿಲ್ಲದೆ ಇದ್ದರೆ ನಮ್ಮ ಜೀವನವೆಲ್ಲ ಸುಖಕರವಾಗುತ್ತಿತ್ತು. ಆದರೂ ಚಿಂತೆಯಿಲ್ಲ! ಇದರಲ್ಲಿ ಎಷ್ಟೇ ಜಯಾಪಜಯಗಳಿದ್ದರೂ, ಎಷ್ಟೇ ಸುಖದುಃಖಗಳಿದ್ದರೂ, ನಾವು ಬಲೆಗೆ ಬೀಳದೇ ಇದ್ದರೆ ಇದೊಂದು ಅಖಂಡ ಆನಂದಮಯವಾಗುವುದು.

ದುಃಖಕ್ಕೆ ಇದೊಂದೇ ಕಾರಣ; ನಾವು ಆಸಕ್ತರು. ಅದರಿಂದ ಬಲೆಗೆ ಬೀಳುತ್ತೇವೆ. ಅದಕ್ಕೆ ಗೀತೆ ಹೀಗೆ ಹೇಳುವುದು: ಎಡೆಬಿಡದೆ ಕರ್ಮಮಾಡಿ, ಆದರೆ ಆಸಕ್ತರಾಗಬೇಡಿ, ಬಲೆಗೆ ಬೀಳಬೇಡಿ. ಎಲ್ಲದ ರಿಂದಲೂ ನಿರ್ಲಿಪ್ತರಾಗುವ ಶಕ್ತಿಯನ್ನು ಮಾತ್ರ ಮೀಸಲಾಗಿಟ್ಟು ಕೊಂಡಿರಿ. ಯಾವುದು ನಮಗೆ ಎಷ್ಟೇ ಪ್ರಿಯಕರವಾಗಿರಲಿ, ನಮ್ಮ ಜೀವ ಯಾವುದನ್ನೇ ಕುರಿತು ಹಂಬಲಿಸಲೀ ಅದನ್ನು ಬಿಡುವುದರಿಂದ ಅತಿ ದಾರುಣ ವ್ಯಥೆಯಾಗಲೀ, ನಿಮಗೆ ಇಚ್ಛೆ ಬಂದಾಗ ಅದನ್ನು ತ್ಯಜಿಸುವ ಶಕ್ತಿಯನ್ನು ಮಾತ್ರ ಕಾಯ್ದಿಟ್ಟುಕೊಂಡಿರಿ. ದುರ್ಬಲರಿಗೆ ಈ ಜನ್ಮದಲ್ಲಿ ಆಗಲೀ ಅಥವಾ ಮತ್ತಾವುದಾದರೂ ಜನ್ಮದಲ್ಲಿ ಆಗಲೀ ಇಲ್ಲಿ ಸ್ಥಳವಿಲ್ಲ. ದುರ್ಬಲತೆಯೇ ಗುಲಾಮಗಿರಿಗೆ ದಾರಿ. ಹಲವಾರು ಶಾರೀರಕ ಮತ್ತು ಮಾನಸಿಕವ್ಯಥೆಗೆ ದುರ್ಬಲತೆಯೇ ಕಾರಣ. ದುರ್ಬಲತೆಯೆ ಸಾವು. ರೋಗಕಾರಕ ಸೂಕ್ಷ್ಮಕ್ರಿಮಿಗಳು ನಮ್ಮ ಸುತ್ತಲೂ ಸಹಸ್ರಾರು ಆವರಿಸಿ ಕೊಂಡಿವೆ. ಆದರೆ ನಾವು ದುರ್ಬಲರಾಗುವವರೆವಿಗೆ, ದೇಹಸಿದ್ಧವಾಗಿ ಅವನ್ನು ಸ್ವಾಗತಿಸಲು ಸಂಕಲ್ಪಿಸುವವರೆಗೆ, ಅವು ನಮಗೆ ಯಾವ ಅಪಾಯವನ್ನೂ ತರಲಾರವು. ನಮ್ಮ ಸುತ್ತಲೂ ಕೋಟ್ಯಂತರ ದುಃಖ ಕಾರಕ ಕ್ರಿಮಿಗಳು ಹಾರಾಡುತ್ತಿರಬಹುದು. ಆದರೂ ಚಿಂತೆಯಿಲ್ಲ! ಅವು ನಮ್ಮ ಹತ್ತಿರ ಬರಲಾರವು. ಮನಸ್ಸು ದುರ್ಬಲವಾಗುವವರೆಗೆ, ನಮ್ಮನ್ನು ಮೆಟ್ಟಿಕೊಳ್ಳುವ ಶಕ್ತಿ ಅದಕ್ಕೆ ಇಲ್ಲ. ಇದೊಂದು ದೊಡ್ಡ ಸತ್ಯ; ಶಕ್ತಿಯೆ ಜೀವನ, ಅಶಕ್ತಿಯೇ ಮರಣ. ಶಕ್ತಿಯೆ ಪರಮಾನಂದ, ಅಖಂಡ ಜೀವನ, ಅಮರತ್ವ. ಅಶಕ್ತಿಯೇ, ಅನವರತ ದುಃಖ, ವ್ಯಾಕುಲತೆ, ಅಶಕ್ತಿಯೇ ಮರಣ.

ಈಗಿರುವ ಆಸಕ್ತಿಯೇ ನಮ್ಮ ಎಲ್ಲಾ ಸಂತೋಷಕ್ಕೂ ಮೂಲ. ನಾವು ನಮ್ಮ ಸ್ನೇಹಿತರಲ್ಲಿ ಆಸಕ್ತರು, ಬಂಧುಗಳಲ್ಲಿ ಆಸಕ್ತರು; ನಾವು ನಮ್ಮ ಯುಕ್ತಿ ಮತ್ತು ಆಧ್ಯಾತ್ಮಿಕ ಫಲಗಳಲ್ಲಿ ಆಸಕ್ತರು. ಬಾಹ್ಯ ವಸ್ತುವಿನಲ್ಲಿ ನಾವು ಆಸಕ್ತರು. ಏಕೆಂದರೆ ನಮಗೆ ಅವುಗಳ ಮೂಲಕ ಸಂತೋಷ ದೊರಕುವುದು. ಪುನಃ, ನಮಗೆ ದುಃಖ ತರುವುದು, ಈ ಆಸಕ್ತಿಯಲ್ಲದೆ ಮತ್ತಾವುದು? ಆನಂದವನ್ನು ಪಡೆಯಬೇಕಾದರೆ ನಾವು ನಿರ್ಲಿಪ್ತರಾಗಬೇಕು. ಇಚ್ಛೆ ಬಂದಾಗ ನಮಗೆ ನಿರ್ಲಿಪ್ತರಾಗುವ ಶಕ್ತಿ ಇದ್ದರೆ ನಮಗೆ ಯಾವ ದುಃಖವೂ ಬರುತ್ತಿರಲಿಲ್ಲ. ಯಾರು ಒಂದು ಕಾರ್ಯದಲ್ಲಿ ತಮ್ಮ ಮನಸ್ಸನ್ನೆಲ್ಲಾ ಕೇಂದ್ರೀಕರಿಸಿ ಆಸಕ್ತರಾಗಬಲ್ಲರೊ ಅವರಿಗೆ ಮಾತ್ರ ಪ್ರಪಂಚದ ಅತ್ಯುತ್ತಮ ಫಲ ಸಿಕ್ಕಬಲ್ಲದು. ಆಸಕ್ತ ರಾಗುವ ಶಕ್ತಿಯಷ್ಟೇ, ಅನಾಸಕ್ತಿಗೂ ಇರಬೇಕಾಗಿದೆ. ಇದೇ ಕಷ್ಟ. ಯಾವ ಆಕರ್ಷಣೆಗೂ ಸಿಕ್ಕದ ಕೆಲವು ಮನುಷ್ಯರು ಇರುವರು. ಅವರು ಯಾರನ್ನೂ ಪ್ರೀತಿಸಲಾರರು, ನಿಷ್ಕರುಣಿಗಳು, ನಿರ್ಲಕ್ಷ್ಯರು. ಜೀವನದ ಎಷ್ಟೋ ದುಃಖಗಳಿಂದ ಅಂತಹವರು ಪಾರಾಗುವರು. ಗೋಡೆ ಎಂದಿಗೂ ದುಃಖ ಪಡುವುದಿಲ್ಲ, ಯಾವಾಗಲೂ ಪ್ರೀತಿಸುವುದಿಲ್ಲ, ಎಂದಿಗೂ ವ್ಯಥೆಪಡುವು ದಿಲ್ಲ. ಆದರೆ ಇದು ಗೋಡೆಯಲ್ಲದೆ ಮತ್ತೇನೂ ಅಲ್ಲ. ನಿಶ್ಚಯವಾಗಿ ಆಸಕ್ತರಾಗಿ, ಬಂಧನಕ್ಕೊಳಗಾಗುವುದು ಗೋಡೆಯಂತಿರುವುದಕ್ಕಿಂತ ಮೇಲು. ಆದಕಾರಣವೇ, ಯಾರು ಎಂದಿಗೂ ಮತ್ತೊಬ್ಬರನ್ನು ಪ್ರೀತಿ ಸಿಲ್ಲವೋ, ನಿರ್ದಯನಾಗಿರುವನೋ, ಅವನು ಜೀವನದ ಎಷ್ಟೋ ದುಃಖ ದಿಂದ ಪಾರಾಗಿರುವಂತೆ, ಸುಖವೂ ಅವನ ಪಾಲಿಗೆ ಇಲ್ಲದೇ ಹೋಗು ವುದು. ನಮಗೆ ಅದಲ್ಲ ಬೇಕಾಗಿರುವುದು. ಅದು ದುರ್ಬಲತೆ, ಅದು ಮೃತ್ಯು. ಯಾವ ಜೀವ ದುರ್ಬಲತೆಯನ್ನು ಅನುಭವಿಸಿಲ್ಲವೋ, ದುಃಖ ವನ್ನು ಅನುಭವಿಸಿಲ್ಲವೊ, ಅದೊಂದು ಔದಾಸೀನ್ಯಸ್ಥಿತಿ. ಅಲ್ಲಿ ಆತ್ಮ ಇನ್ನೂ ಜಾಗ್ರತವಾಗಿಲ್ಲ. ನಮಗೆ ಅದು ಬೇಕಾಗಿಲ್ಲ.

ನಮಗೆ ಪ್ರೀತಿಯ ಅದ್ಭುತಶಕ್ತಿ, ಆಸಕ್ತರಾಗುವ ಪ್ರಚಂಡಶಕ್ತಿ, ಮನಸ್ಸನ್ನು ಒಂದು ವಸ್ತುವಿನಮೇಲೆ ಅಖಂಡವಾಗಿ ಏಕಾಗ್ರಮಾಡುವ ಶಕ್ತಿ, ಉಳಿದವರ ಹಿತಕ್ಕಾಗಿ ನಮ್ಮನ್ನೇ ಕಳೆದುಕೊಂಡು, ಸಾಯಲು ಸಿದ್ಧರಾಗಿರುವ ದೇವತೆಗಳ ಶಕ್ತಿಗಿಂತ ಹೆಚ್ಚು ಬೇಕು. ನಾವು ದೇವತೆ ಗಳಿಗಿಂತ ಮೇಲೆ ಹೋಗಬೇಕು. ಪೂರ್ಣಾತ್ಮನು ತಾನು ಪ್ರೀತಿಸುವ ಏಕಮಾತ್ರ ವಸ್ತುವಿನಮೇಲೆ ತನ್ನ ಮನಸ್ಸನ್ನೆಲ್ಲಾ ಹರಿಸಬಲ್ಲ, ಆದರೂ

ಆತ ನಿರ್ಲಿಪ್ತನು. ಇದು ಹೇಗೆ ಸಾಧ್ಯ? ನಾವು ಕಲಿಯಬೇಕಾದ ಮತ್ತೊಂದು ರಹಸ್ಯವಿದು.

ಭಿಕ್ಷುಕನಿಗೆ ಎಂದಿಗೂ ಸಂತೋಷವಿಲ್ಲ. ಭಿಕ್ಷುಕನಿಗೆ ಬರುವ ಭಿಕ್ಷದ ಹಿಂದೆ, ಧಿಕ್ಕಾರ ಮತ್ತು ಅನುತಾಪವಿದೆ. ಭಿಕ್ಷುಕನೊಬ್ಬ ಕೀಳು ಜೀವಿ ಎಂಬ ಭಾವವಾದರೂ ಅದರ ಹಿಂದೆ ಇದೆ. ತನಗೆ ಸಿಕ್ಕಿರುವುದನ್ನು ಅವನು ಎಂದಿಗೂ ಅನುಭವಿಸಲಾರ.

ನಾವೆಲ್ಲ ಭಿಕ್ಷುಕರು. ನಾವು ಏನುಮಾಡಿದರೂ ನಮಗೆ ಪ್ರತಿಫಲ ಬೇಕು. ನಾವೆಲ್ಲ ವ್ಯಾಪಾರಿಗಳು. ಜೀವನದಲ್ಲಿ ವ್ಯಾಪಾರಿಗಳು, ಸದ್ಗುಣಗಳಲ್ಲಿ ವ್ಯಾಪಾರಿಗಳು, ಧರ್ಮದಲ್ಲಿ ವ್ಯಾಪಾರಿಗಳು, ಅಯ್ಯೋ! ಪ್ರೀತಿಯಲ್ಲೂ ನಾವು ವ್ಯಾಪಾರಿಗಳು.

ನೀವು ವ್ಯಾಪಾರಕ್ಕೆ ಬಂದರೆ, ಕೊಟ್ಟು ತೆಗೆದುಕೊಳ್ಳುವುದಕ್ಕೆ ಬಂದರೆ ಕೊಂಡುಮಾರುವ ನಿಯಮವನ್ನು ಅನುಸರಿಸಿ. ಕೆಲವುವೇಳೆ ಅನುಕೂಲ, ಕೆಲವುವೇಳೆ ಪ್ರತಿಕೂಲ. ಧಾರಣೆಯಲ್ಲಿ ಏರಿಳಿತಗಳಿವೆ. ಯಾವಾಗಲೂ ಪೆಟ್ಟನ್ನು ನಿರೀಕ್ಷಿಸಬೇಕಾಗಿದೆ. ನಾವು ಕನ್ನಡಿಯಲ್ಲಿ ನೋಡಿಕೊಂಡಂತೆ, ಅದು ನಮ್ಮ ಮುಖವನ್ನು ಪ್ರತಿಬಿಂಬಿಸುವುದು. ನೀವು ಅಣಕಿಸುವಿರಿ, ಅದೂ ನಿಮ್ಮನ್ನು ಅಣಕಿಸುವುದು. ನೀವು ನಕ್ಕರೆ ಕನ್ನಡಿಯಲ್ಲಿರುವುದೂ ನಗುವುದು. ಇದೇ ಕೊಂಡುಮಾರುವುದು, ಕೊಟ್ಟು ತೆಗೆದುಕೊಳ್ಳುವುದು.

ನಾವು ಬಂಧನಕ್ಕೆ ಬೀಳುವೆವು. ಅದು ಹೇಗೆ? ನಾವು ಕೊಡುವುದರಿಂದ ಅಲ್ಲ. ನಾವು ನಿರೀಕ್ಷಿಸುವುದರಿಂದ. ನಮ್ಮ ಪ್ರೀತಿಗೆ ಬದಲು ದುಃಖ ಬರುವುದು. ನಾವು ಪ್ರೀತಿಸುವುದರಿಂದ ಅಲ್ಲ; ಪುನಃ ಪ್ರೀತಿಗೆ ಫಲವನ್ನು ಅಪೇಕ್ಷಿಸುವುದರಿಂದ. ಎಲ್ಲಿ ಕೊರತೆ ಇಲ್ಲವೋ ಅಲ್ಲಿ ದುಃಖವಿಲ್ಲ. ಆಸೆ ನಿಯಮಗಳಿಂದ ಬದ್ಧವಾಗಿದೆ. ಆಸೆ ದುಃಖವನ್ನು ತಂದೇತರುವುದು.

ನಿಜವಾದ ಜಯಕ್ಕೆ, ನಿಜವಾದ ಆನಂದಕ್ಕೆ, ಇರುವ ಮಹಾ ರಹಸ್ಯವಿದು. ಯಾರು ಪ್ರತಿಫಲವನ್ನು ಅಪೇಕ್ಷಿಸುವುದಿಲ್ಲವೊ, ಪೂರ್ಣ ನಿಸ್ವಾರ್ಥಪರರೊ ಅವರೇ, ಹೆಚ್ಚು ಜಯಶಾಲಿಗಳು. ಇದೊಂದು ವಿರೋಧಾಭಾಸದಂತೆ ಕಾಣುವುದು. ಯಾರು ಜೀವನದಲ್ಲಿ ನಿಸ್ವಾರ್ಥಪರರೋ, ಅವರು ಮೋಸದ ಬಲೆಗೆ ಬೀಳುವುದು, ವ್ಯಥೆಪಡುವುದು ನಮಗೆ ಗೊತ್ತಿಲ್ಲವೆ? ತೋರಿಕೆಗೆ ಇದು ಸತ್ಯ. ಏಸುಕ್ರಿಸ್ತ ನಿಸ್ವಾರ್ಥನಾಗಿದ್ದ, ಆದರೂ ಅವನನ್ನು ಶಿಲುಬೆಗೆ ಏರಿಸಿದರು, ನಿಜ; ಆದರೆ ಅವನ ನಿಸ್ವಾರ್ಥತೆ

ಮತ್ತೊಂದು ಜಯಕ್ಕೆ, ಕೋಟ್ಯಂತರ ಜನರಿಗೆ ನಿಜವಾದ ಶಾಂತಿ, ಮಂಗಳ ಲಭಿಸುವುದಕ್ಕೆ ಕಾರಣವಾಯಿತು.

ಏನನ್ನೂ ಕೇಳಬೇಡಿ; ಪ್ರತಿಯಾಗಿ ಏನನ್ನೂ ಆಶಿಸಬೇಡಿ. ಏನನ್ನು ನೀವು ಕೊಡಬೇಕೊ ಅದನ್ನು ಕೊಡಿ; ಅದು ನಿಮಗೆ ಹಿಂತಿರುಗಿ ಬರುವುದು. ಆದರೆ ಅದನ್ನು ನೀವು ಈಗ ಆಲೋಚಿಸಬೇಡಿ. ಅದು ಸಾವಿರಪಾಲಿನಷ್ಟು ಹೆಚ್ಚಾಗಿ ಪುನಃ ನಮಗೆ ಹಿಂತಿರುಗಿ ಬರುವುದು. ಆದರೆ ನಮ್ಮ ಗಮನ ಅದರ ಕಡೆಗೆ ಇರಕೂಡದು. ಆದರೂ ಕೊಡುವ ಶಕ್ತಿ ಇರಲಿ; ಕೊಡಿ; ಅದು ಅಲ್ಲಿ ಕೊನೆಗಾಣಲಿ. ಜೀವನವೆಲ್ಲ ಕೊಡುವುದಕ್ಕೆ ಇರುವುದು ಎಂಬುದನ್ನು ಕಲಿಯಿರಿ. ಪ್ರಕೃತಿ ಕೊಡುವಂತೆ ನಿಮ್ಮನ್ನು ಬಲಾತ್ಕರಿಸುವುದು. ಆದಕಾರಣ ಮನಃಪೂರ್ವಕವಾಗಿ ಕೊಡಿ. ಈಗಲೋ, ಆಗಲೋ, ನೀವು ಕೊಡಲೇಬೇಕಾಗಿದೆ. ಸಂಗ್ರಹಿಸುವುದಕ್ಕೆ ನೀವು ಪ್ರಪಂಚಕ್ಕೆ ಬರುವಿರಿ. ಮುಷ್ಟಿ ಹಿಡಿದು ಬಾಚಲೆತ್ನಿಸುವಿರಿ. ಆದರೆ ಪ್ರಕೃತಿ ನಿಮ್ಮ ಕತ್ತನ್ನು ಅದುಮಿ ಮುಷ್ಟಿ ತೆರೆಯುವಂತೆ ಮಾಡುವುದು. ನಿಮಗೆ ಇಚ್ಛೆ ಇರಲಿ ಇಲ್ಲದಿರಲಿ, ಕೊಡಲೇಬೇಕಾಗುವುದು. "ನಾನು ಕೊಡುವುದಿಲ್ಲ" ಎಂದು ಹೇಳಿದೊಡನೆಯೇ ಪೆಟ್ಟು ಬೀಳುವುದು, ವ್ಯಥೆಯಾಗುವುದು. ಯಾರೂ ಇಲ್ಲ; ಕೊನೆಗೆ ಎಲ್ಲರೂ ತಮ್ಮ ಸರ್ವಸ್ವವನ್ನು, ಬಲಾತ್ಕಾರದಿಂದ ತ್ಯಜಿಸಲೇಬೇಕಾಗುವುದು. ಈ ನಿಯಮಕ್ಕೆ ವಿರೋಧವಾಗಿ ಯಾರು ಎಷ್ಟು ಹೋರಾಡಿದರೆ ಅಷ್ಟೂ ಹೆಚ್ಚು ದುಃಖಕ್ಕೆ ಈಡಾಗಬೇಕಾಗುವುದು. ನಮಗೆ ತ್ಯಜಿಸುವುದಕ್ಕೆ ಧೈರ್ಯವಿಲ್ಲ. ಪ್ರಕೃತಿಯ ಈ ಆವಶ್ಯಕ ಮಹಾಕರೆಗೆ ನಾವು ಬಾಗಲಾರೆವು. ಆದಕಾರಣವೇ ನಾವು ದುಃಖಿಗಳಾಗಿರುವೆವು. ಕಾಡು ಹೋಯಿತು, ಆದರೆ ಕಾವು ಅದಕ್ಕೆ ಪ್ರತಿಯಾಗಿ ಬರುವುದು. ಸೂರ್ಯ ಸಾಗರದಿಂದ ನೀರನ್ನು ಹೀರುತ್ತಿರುವನು, ಪುನಃ ಮಳೆಯಂತೆ ಧರೆಗೆ ಕರೆಯುವುದಕ್ಕೆ. ಕೊಟ್ಟು ತೆಗೆದುಕೊಳ್ಳುವುದಕ್ಕೆ ನೀನೊಂದು ಯಂತ್ರ. ಕೊಡುವುದಕ್ಕೇ ನೀನು ತೆಗೆದುಕೊಳ್ಳುವುದು. ಪ್ರತಿಯಾಗಿ ಏನನ್ನೂ ಕೋರಬೇಡಿ. ಹೆಚ್ಚು ನೀವು ಕೊಟ್ಟಷ್ಟೂ ಹೆಚ್ಚು ನಿಮಗೆ ಬರುವುದು. ಈ ಕೋಣೆಯಿಂದ ನೀವು ಎಷ್ಟು ಬೇಗ ಗಾಳಿಯನ್ನು ಹೊರಕ್ಕೆ ತಳ್ಳಿದರೆ, ಅಷ್ಟು ಬೇಗ ಹೊರಗಿನಿಂದ ಗಾಳಿ ಒಳಗೆ ಬರುವುದು. ಎಲ್ಲಾ ಬಾಗಿಲುಗಳನ್ನೂ ಕಂಡಿಯನ್ನೂ ನೀವು ಮುಚ್ಚಿದರೆ ಯಾವುದು ಒಳಗೆ ಇರುವುದೊ ಅದು ಒಳಗೇ ಇರುವುದು. ಆದರೆ ಯಾವುದು ಹೊರಗೆ ಇರುವುದೊ ಅದು ಎಂದಿಗೂ ಒಳಗೆ

ಬರುವುದಿಲ್ಲ. ಯಾವುದು ಒಳಗೆ ಇರುವುದೊ ಅದು ನಿಂತು ನಾರುವುದು, ವಿಷವಾಗುವುದು. ನದಿ ಅನವರತವೂ ಸಾಗರಕ್ಕೆ ನೀರನ್ನು ಕೊಡುವುದು, ಅನವರತವೂ ನೀರು ನದಿಗೆ ಬರುವುದು. ಸಾಗರಕ್ಕೆ ಸೇರುವುದನ್ನು ತಡೆಯಬೇಡಿ. ಅದನ್ನು ಮಾಡಿದೊಡನೆಯೆ ಮೃತ್ಯು ನಿಮ್ಮನ್ನು ಹಿಡಿಯುವುದು.

ಭಿಕ್ಷುಕರಾಗಬೇಡಿ; ನಿರ್ಲಿಪ್ತರಾಗಿರಿ; ಇದೇ ಜೀವನದ ಕಡು ಕಷ್ಟ ಕಾರ್ಯ. ದಾರಿಯಲ್ಲಿರುವ ಅಪಾಯುಗಳನ್ನು ನೀವು ಗಮನಿಸುವುದಿಲ್ಲ. ಕಷ್ಟವನ್ನು ನಾವು ಯುಕ್ತಿಪೂರ್ವಕವಾಗಿ ಅರಿತರೂ ಅದನ್ನು ಅನುಭವಿಸುವವರೆಗೂ ಅದರ ಪರಿಚಯು ನಮಗೆ ಇರುವುದಿಲ್ಲ. ದೂರದಿಂದ ಉದ್ಯಾನವನದ ವಿಹಂಗಮ ದೃಷ್ಟಿಯೊಂದು ನಮಗೆ ದೊರೆಯಬಹುದು. ಆದರೆ ಅದರಿಂದ ಏನು ಪ್ರಯೋಜನ? ಅದನ್ನು ನಾವು ಸ್ವಂತ ತಿಳಿದುಕೊಳ್ಳುವುದು, ಅನುಭವಿಸುವುದು, ಅದರ ಮಧ್ಯದಲ್ಲಿ ನಾವು ಇರುವಾಗ. ನಮ್ಮ ಪ್ರತಿಯೊಂದು ಪ್ರಯತ್ನವೂ ಸೋಲಿನಲ್ಲಿ ಕೊನೆಗೊಂಡರೂ, ಕತ್ತರಿಸಿಹೋಗಿ, ರಕ್ತ ಸೋರುತ್ತಿದ್ದರೂ ಎದೆಗೆಡಕೂಡದು. ಇಂತಹ ಕಷ್ಟಪರಂಪರೆಯಲ್ಲಿಯೂ ನಮ್ಮ ದೈವೀ ಶಕ್ತಿಯನ್ನು ಮುಕ್ತಕಂಠದಿಂದ ಎತ್ತಿಹಿಡಿಯಬೇಕು. ನಮಗೆ ಶಕ್ತಿ ಇರುವಷ್ಟು ಪೆಟ್ಟಿಗೆ ಪೆಟ್ಟು, ಮೋಸಕ್ಕೆ ಮೋಸ, ಸುಳ್ಳಿಗೆ ಸುಳ್ಳನ್ನು ಪ್ರತಿಯಾಗಿ ಹಿಂತಿರುಗಿ ಕೊಡುವಂತೆ ನಮ್ಮನ್ನು ಪ್ರೇರೇಪಿಸುವುದು. ಆಗ ಮುಯ್ಯಿಗೆ ಮುಯ್ಯಿ ಕೊಡದೆ ಶಾಂತರಾಗಿ ನಿರ್ಲಿಪ್ತರಾಗಿರಬೇಕಾದರೆ ಅತಿದೈವಿಕಶಕ್ತಿ ಬೇಕಾಗುವುದು.

ಪ್ರತಿದಿನವೂ ನಾವು ಅನಾಸಕ್ತರಾಗಿರಬೇಕೆಂಬ ಶಪಥ ಮರಳಿ ಮರಳಿ ಮಾಡುವೆವು. ಹಿಂದೆ ನಮ್ಮ ಪ್ರೀತಿ ಆಸಕ್ತಿಗಳಿಗೆ ಪಾತ್ರವಾದ ವಿಷಯವಸ್ತುಗಳನ್ನು ಹಿಂತಿರುಗಿ ನೋಡಿದಾಗ, ಅವುಗಳಲ್ಲಿ ಪ್ರತಿಯೊಂದೂ ನಮ್ಮನ್ನು ಎಷ್ಟು ವ್ಯಥೆಗೆ ಗುರಿಮಾಡಿತು ಎಂಬುದು ಕಾಣುವುದು. ಪ್ರೀತಿಗೋಸುಗ ನಿರಾಶೆಯ ಪಾತಾಳಕ್ಕೆ ಹೋದೆವು! ಮತ್ತೊಬ್ಬರ ಕೈಯಲ್ಲಿ ಗುಲಾಮರಾದೆವು, ಅಧಃಪಾತಾಳಕ್ಕೆ ನೂಕಲ್ಪಟ್ಟೆವು! ಪುನಃ ಹೊಸ ಶಪಥವನ್ನು ಮಾಡುವೆವು. "ಇಂದಿನಿಂದ ನಾನು ಯಜಮಾನನಾಗುವೆನು; ಇಂದಿನಿಂದ ನನ್ನನ್ನು ನಾನು ಜಯಿಸುವೆನು." ಆದರೆ ಕಾಲ ಬಂದಾಗ ಹಳೆಯ ಕಥೆಯೆ! ಪುನಃ ಜೀವ ಬಂಧನಕ್ಕೆ ಸಿಕ್ಕಿ ಬೀಳುವುದು. ಪಾರಾಗಲಾರದು. ಹಕ್ಕಿ ಬಲೆಯಲ್ಲಿದೆ, ಒದ್ದಾಡುತ್ತಿದೆ, ರೆಕ್ಕೆ ಬಡಿಯುತ್ತಿದೆ. ಇದೇ ನಮ್ಮ ಬಾಳು.

ನನಗೆ ಕಷ್ಟ ಗೊತ್ತಿದೆ. ಭಯಂಕರ ಅವು. ನಮ್ಮಲ್ಲಿ ನೂರಕ್ಕೆ ತೊಂಬತ್ತು ಮಂದಿ ನಿರಾಶೆಯಿಂದ ಎದೆಗೆಡುವೆವು. ಕ್ರಮೇಣ ಅನೇಕ ವೇಳೆ ಎಲ್ಲದರಲ್ಲಿಯೂ ಕೇಡನ್ನೇ ಪ್ರತೀಕ್ಷಿಸುವ ಸ್ವಭಾವದವರಾಗಿ ವಿಶ್ವಾಸ, ಪ್ರೀತಿ, ಘನತೆ, ಪವಿತ್ರತೆ, ಇವುಗಳನ್ನು ನಂಬುವುದೇ ಇಲ್ಲ. ಆದಕಾರಣವೆ ಯಾರು ಬಾಲ್ಯದಲ್ಲಿ ಕ್ಷಮಾಶೀಲರಾಗಿದ್ದರೊ, ದಯಾಳುಗಳಾಗಿದ್ದರೋ, ಸರಳಸ್ವಭಾವರಾಗಿದ್ದರೋ, ನಿಷ್ಕಪಟಿಗಳಾಗಿದ್ದರೋ ಅವರು ವಯಸ್ಸಾದ ಮೇಲೆ ಮಿಥ್ಯಾಜೀವಿಗಳಾಗುವರು. ಅವರ ಮನಸ್ಸೊಂದು ಕಪಟವ್ಯೂಹ. ಅದರಲ್ಲಿ ಎಷ್ಟೋ ಬಾಹ್ಯ ನೈಪುಣ್ಯತೆ ಇದೆ. ಬಹುಶಃ ಅವರು ಮುಂಗೋಪಿಗಳಲ್ಲ. ಅವರು ಹೆಚ್ಚು ಮಾತನಾಡುವುದಿಲ್ಲ. ಆದರೆ ಅವರು ಹಾಗೆ ಮಾಡುವುದು ಒಳ್ಳೆಯದು. ಅವರ ಹೃದಯ ನಿರ್ಜೀವವಾಗಿದೆ. ಅದಕ್ಕೇ ಅವರು ಮಾತನಾಡುವುದಿಲ್ಲ. ಅವರು ನಿಂದಿಸುವುದಿಲ್ಲ, ಕೋಪಗೊಳ್ಳುವುದಿಲ್ಲ. ಆದರೆ ಅವರು ಕೋಪಗೊಳ್ಳುವುದು ಒಳ್ಳೆಯದು. ಅವರು ಮತ್ತೊಬ್ಬರನ್ನು ನಿಂದಿಸುವುದು ಸಾವಿರ ಪಾಲು ಮೇಲು. ಅವರಿಗೆ ಇದು ಸಾಧ್ಯವಿಲ್ಲ. ಮೃತ್ಯು ಅವರ ಹೃದಯದಲ್ಲಿ ಮನೆ ಮಾಡಿಕೊಂಡಿದೆ. ಶೀತಲಕರಗಳು ಅದನ್ನು ವಶಮಾಡಿಕೊಂಡಿವೆ. ಅದು ಶಾಪ ಕೊಡುವುದಕ್ಕೂ, ನಿಂದಿಸುವುದಕ್ಕೂ, ಚಲಿಸುವುದೇ ಇಲ್ಲ.

ಇವುಗಳೆಲ್ಲದರಿಂದ ನಾವು ಪಾರಾಗಬೇಕಾಗಿದೆ. ಆದಕಾರಣವೇ ಅತಿದೈವಿಕಶಕ್ತಿ ನಮಗೆ ಬೇಕೆಂದು ಹೇಳುವುದು. ಅತಿಮಾನವಶಕ್ತಿಗೆ ಸಾಕಾದಷ್ಟು ಬಲವಿಲ್ಲ. ಇದರಿಂದ ಪಾರಾಗಬೇಕಾದರೆ ಅತಿದೈವಿಕಶಕ್ತಿಯೊಂದೇ ಮಾರ್ಗ. ಇದರ ಸಹಾಯದಿಂದ ಮಾತ್ರ ನಾವು ಇಂತಹ ಅದ್ಭುತವ್ಯೂಹದಿಂದ, ದಾರುಣ ದುಃಖವರ್ಷದಿಂದ, ಅಪಾಯಕ್ಕೆ ಬೀಳದೆ, ಬರಬಲ್ಲೆವು. ನಮ್ಮನ್ನು ಛಿದ್ರಛಿದ್ರವಾಗಿ ತುಂಡುಮಾಡಬಹುದು, ಕತ್ತರಿಸಬಹುದು. ಆದರೂ ನಮ್ಮ ಹೃದಯ ಸದಾ ಕಾಲದಲ್ಲಿಯೂ ಉದಾರವಾಗಬೇಕು. ಉಜ್ವಲವಾಗಬೇಕು.

ಇದು ಕಡುಕಷ್ಟ. ಆದರೆ ನಿರಂತರ ಸಾಧನೆಯ ಬಲದಿಂದ ಅಂತಹ ಸ್ಥಿತಿಯಿಂದ ಪಾರಾಗಬಹುದು. ನಾವೇ ವಶರಾಗುವವರೆಗೆ ನಮಗೆ ಏನೂ ಆಗಲಾರದು ಎಂಬುದನ್ನು ತಿಳಿಯಬೇಕು. ದೇಹ ಸಿದ್ಧವಾಗುವವರೆವಿಗೆ ಯಾವ ರೋಗವೂ ಬರುವುದಿಲ್ಲವೆಂಬುದನ್ನು ನಾನು ಈಗತಾನೇ ಹೇಳಿರುವೆನು. ಅದು ವಿಷಕ್ರಿಮಿಗಳಮೇಲೆ ಮಾತ್ರ ನಿಂತಿಲ್ಲ. ದೇಹ ಅದನ್ನು

ಸ್ವೀಕರಿಸಲು ಸಿದ್ಧವಾಗಿರಬೇಕು. ನಾವು ಯಾವುದಕ್ಕೆ ಅರ್ಹರೋ ಅದು ನಮಗೆ ದೊರಕುವುದು. ದುಃಖ ಎಂದಿಗೂ ನನಗೆ ಯೋಗ್ಯವಿಲ್ಲದೇ ಬರಲಿಲ್ಲವೆಂಬುದನ್ನು ಅಹಂಕಾರವನ್ನು ಬಿಟ್ಟು, ಅರ್ಥಮಾಡಿಕೊಳ್ಳೋಣ. ಅರ್ಹರಾಗದೆ ನಮಗೆ ಯಾವ ಒಂದು ಪೆಟ್ಟೂ ಬೀಳಲಿಲ್ಲ. ನನ್ನ ಸ್ವಂತ ಕೈಗಳಿಂದ ಬರಮಾಡಿಕೊಳ್ಳದೆ ಪಾಪ ಒಂದೂ ಬರಲಿಲ್ಲ. ಇದನ್ನು ನಾವು ತಿಳಿದುಕೊಳ್ಳಬೇಕು. ನೀವು ಆಲೋಚನೆ ಮಾಡಿ ನೋಡಿ, ನಿಮಗೆ ಬಿದ್ದ ಪ್ರತಿಯೊಂದು ಪೆಟ್ಟೂ, ನೀವೇ ಅದಕ್ಕೆ ಸಿದ್ಧರಾದುದರಿಂದ ಬಿತ್ತು. ನೀವು ಅರ್ಧ ಮಾಡಿದಿರಿ, ಬಾಹ್ಯಪ್ರಪಂಚ ಅರ್ಧ ಮಾಡಿತು. ಪೆಟ್ಟು ಬಂದುದು ಹೀಗೆ. ಇದು ನಮ್ಮ ಅಹಂಕಾರವನ್ನು ತಗ್ಗಿಸುವುದು. ಅದೇ ಕಾಲದಲ್ಲಿ ಈ ಆಲೋಚನೆಯಿಂದ ಒಂದು ಆಶಾಭಾವನೆ ಉದಿಸುವುದು. ಆ ಆಶಾ ಭಾವನೆಯೆ : “ನನಗೆ ಬಾಹ್ಯಪ್ರಪಂಚದಮೇಲೆ ಸ್ವಾಧೀನವಿಲ್ಲ ; ಆದರೆ ಯಾವುದು ನನ್ನಲ್ಲಿದೆ, ನನ್ನ ಹತ್ತಿರವಿದೆ, ಅವರಮೇಲೆ ಮಾತ್ರ ಸ್ವಾತಂತ್ರ್ಯವಿದೆ. ನನ್ನ ಸ್ವಾಧೀನದಲ್ಲಿರುವ ಪ್ರಪಂಚ ಮತ್ತು ಬಾಹ್ಯ ಪ್ರಪಂಚ ಇವೆರಡೂ ಒಟ್ಟಿಗೆ ಸೇರುವುದು. ನನಗೆ ಪೆಟ್ಟು ಬೀಳುವುದಕ್ಕೆ ಕಾರಣವಾಗಬೇಕಾದರೆ, ಯಾವುದು ನನ್ನ ಸ್ವಾಧೀನದಲ್ಲಿರುವುದೋ ಅದನ್ನು ನಾನು ಕೊಡುವುದಿಲ್ಲ. ಆಗ ಪೆಟ್ಟು ಹೇಗೆ ಬೀಳಬಲ್ಲುದು ? ನನ್ನ ನಿಗ್ರಹ ನಿಜವಾಗಿ ನನಗೆ ಸಿಕ್ಕಿದರೆ ಪೆಟ್ಟು ಎಂದಿಗೂ ಬೀಳುವುದೇ ಇಲ್ಲ.”

ಬಾಲ್ಯದಿಂದಲೂ ನಾವು ಯಾವಾಗಲೂ ನಮ್ಮಿಂದ ಹೊರಗೆ ತಪ್ಪನ್ನು ಹೊರಿಸಲು ಪ್ರಯತ್ನಿಸುತ್ತಿರುವೆವು. ನಾವು ಯಾವಾಗಲೂ ಮತ್ತೊಬ್ಬರನ್ನು ತಿದ್ದುವುದರಲ್ಲಿ ನಿರತರಾಗಿರುವೆವು; ನಮ್ಮನ್ನು ತಿದ್ದಿಕೊಳ್ಳುವುದರಲ್ಲಿ ಅಲ್ಲ. ದುಃಖಿಗಳಾದರೆ, “ಅಯ್ಯೊ! ಈ ಪ್ರಪಂಚ ಒಂದು ಪೈಶಾಚಿಕ ಜಗತ್ತು!” ಮತ್ತೊಬ್ಬರನ್ನು ದೂರಿ, “ಎಂತಹ ಮೂಢರು, ಮೋಹ ಪರವಶರು!” ಎನ್ನುವೆವು. ನಾವು ನಿಜವಾಗಿಯೂ ಅಷ್ಟು ಒಳ್ಳೆಯವರಾಗಿದ್ದರೆ ಈ ಪ್ರಪಂಚದಲ್ಲಿ ಏಕೆ ಇರಬೇಕಾಗಿತ್ತು? ಇದೊಂದು ಪೈಶಾಚಿಕ ಜಗತ್ತಾದರೆ ನಾನು ಒಂದು ಪಿಶಾಚಿ. ಇಲ್ಲದೇ ಇದ್ದರೆ, ನಾನು ಇಲ್ಲಿಗೆ ಹೇಗೆ ಬರುತ್ತಿದ್ದೆ ? “ಅಯ್ಯೋ! ಪ್ರಪಂಚದ ಜನರು ಎಷ್ಟು ಸ್ವಾರ್ಥಪರರು!” ಇದೇನೊ ಸತ್ಯ. ಆದರೆ ನಾವು ಅವರಿಗಿಂತ ಮೇಲಾದರೆ ಅವರ ಜೊತೆಯಲ್ಲಿ ಏತಕ್ಕೆ ಇರುವೆವು ? ಇವನ್ನು ಆಲೋಚಿಸಿ ನೋಡಿ ?

ನಾವು ಯಾವುದಕ್ಕೆ ಯೋಗ್ಯರೊ ಅದು ನಮಗೆ ದೊರಕುವುದು.

ಪ್ರಪಂಚ ಕೆಟ್ಟದ್ದು ನಾನು ಒಳ್ಳೆಯವನು ಎಂದು ಹೇಳುವುದು ಸುಳ್ಳು. ಇದು ಎಂದಿಗೂ ಹಾಗೆ ಆಗಲಾರದು. ನಮಗೆ ನಾವೇ ಹೇಳಿಕೊಳ್ಳುವ ಒಂದು ಘೋರ ಅಸತ್ಯ.

ನಾವು ಕಲಿಯಬೇಕಾದ ಮೊದಲನೆ ನೀತಿಯೇ ಇದು. ಶಪಥ ಮಾಡಿ. ಹೊರಗಿರುವುದಾವುದನ್ನೂ ನಿಂದಿಸಬೇಡಿ. ಹೊರಗಿನವರಾರನ್ನೂ ದೂರಬೇಡಿ. ಮನುಷ್ಯರಾಗಿ, ಎದ್ದು ನಿಲ್ಲಿ! ನೀವು ಹೊಣೆಗಾರರಾಗಿ; ಇದು ನಿತ್ಯ ಸತ್ಯವೆನ್ನುವುದು ಆಗ ಗೊತ್ತಾಗುವುದು. ಮೊದಲು ನಿಮ್ಮ ಸ್ವಾಧೀನವನ್ನು ಪಡೆಯಿರಿ.

ಒಂದು ಕ್ಷಣ ನಮ್ಮ ಪೌರುಷವನ್ನು ಕುರಿತು ಅಷ್ಟೊಂದು ಮಾತ ನಾಡುವೆವು. ದೇವತೆಗಳು ನಾವು, ಸರ್ವಜ್ಞರು ನಾವು, ಎಲ್ಲವನ್ನೂ ಸಾಧಿಸಬಲ್ಲೆವು; ಅನಿಂದ್ಯರು ನಾವು, ಕಳಂಕರಹಿತರು ನಾವು. ಪ್ರಪಂಚದ ಅತ್ಯಂತ ನಿಸ್ವಾರ್ಥಪರರು ನಾವು ಎಂದು ಹೆಮ್ಮೆ ಕೊಚ್ಚಿಕೊಳ್ಳುವೆವು. ಮರುಕ್ಷಣ ಒಂದು ಸಣ್ಣ ಕಲ್ಲು ನಮಗೆ ವ್ಯಥೆ ಕೊಡುವುದು. ಜಾಕನ ಸ್ವಲ್ಪ ಕೋಪ ನಮ್ಮನ್ನು ಭಂಗಿಸುವುದು. ಯಾವ ಕೆಲಸಕ್ಕೆ ಬಾರದ ದಾರಿಹೋಕನು ಕೂಡ, ಈ ದೇವತೆಗಳನ್ನು ದುಃಖಿಗಳನ್ನಾಗಿ ಮಾಡು ವನು! ನಾವು ಅಂತಹ ದೇವತೆಗಳಾದರೆ ಸ್ಥಿತಿ ಹೀಗಿರುತ್ತಿತ್ತೆ? ಇದಕ್ಕೆ ಪ್ರಪಂಚವನ್ನು ದೂರುವುದು ಸರಿಯೆ? ಪರಿಶುದ್ಧಾತ್ಮನೂ ಮಹಾ ಗುಣಾನ್ವಿತನೂ ಆದ ದೇವರು, ನಮ್ಮ ಉಪಾಯಗಳಿಂದ ದುಃಖಕ್ಕೆ ಈಡಾಗಬಲ್ಲನೆ? ನೀವು ಹಾಗೆ ನಿಸ್ವಾರ್ಥಪರರಾದರೆ ನೀವೇ ದೇವರ ಸಮಾನ. ಪ್ರಪಂಚ ಹೇಗೆ ನಿಮ್ಮನ್ನು ವ್ಯಥೆಗೆ ಈಡುಮಾಡಬಲ್ಲುದು? ಸಪ್ತಮಹಾನರಕದಲ್ಲಿಯೂ ಸ್ವಲ್ಪವೂ ಸೋಕದೆ ಪಾರಾಗಬಲ್ಲಿರಿ. ಆದರೆ ನಿನ್ನ ದೋಷಾರೋಪಣೆ ಮಾಡುವ ಸ್ವಭಾವವೇ, ಬಾಹ್ಯಪ್ರಪಂಚವನ್ನು ನಿಂದಿಸುವುದೇ, ನಿನ್ನಲ್ಲಿ ಬಾಹ್ಯಪ್ರಪಂಚದ ಇರವನ್ನು ತೋರುವುದು. ಅದರ ಇರವನ್ನು ನೀನು ಅನುಭವಿಸುವುದೇ, ನೀನು ಯಾರೆಂದು ಸಾಧಿ ಸಲು ಹೊರಟಿರುವೆಯೋ ಅವನಾಗಿಲ್ಲವೆಂಬುದನ್ನು ಸಮರ್ಥಿಸುವುದು. ಬಾಹ್ಯಪ್ರಪಂಚ ನಿನ್ನನ್ನು ಹಿಂಸಿಸುತ್ತಿದೆ ಎಂದು ಭಾವಿಸಿ, "ಅಯ್ಯೊ, ಈ ಪೈಶಾಚಿಕ ಜಗತ್ತು! ಈ ಮನುಷ್ಯ ನನ್ನನ್ನು ಹಿಂಸಿಸುತ್ತಿರುವನು, ಆ ಮನುಷ್ಯ ನನ್ನನ್ನು ಹಿಂಸಿಸುತ್ತಿರುವನು" ಹೀಗೆ ಹೇಳುತ್ತ, ದುಃಖದ ಮೇಲೆ ದುಃಖವನ್ನು ಹೇರುತ್ತ, ನಿಮ್ಮ ಅಪರಾಧವನ್ನು ಇನ್ನೂ ಹೆಚ್ಚು

ಮಾಡಿಕೊಳ್ಳುತ್ತಿರುವಿರಿ. ಇದು ಆಗಲೇ ಇರುವ ದುಃಖಕ್ಕೆ ಸುಳ್ಳನ್ನು ಬೆರಸಿದಂತೆ.

ನಮ್ಮನ್ನು ನಾವು ರಕ್ಷಿಸಿಕೊಳ್ಳಬೇಕು. ಅದು ಮಾತ್ರ ನಮ್ಮಿಂದ ಸಾಧ್ಯ. ಕೆಲವು ಕಾಲ ಮತ್ತೊಬ್ಬರನ್ನು ತಿದ್ದುವ ಕೆಲಸಕ್ಕೆ ವಿರಾಮ ವಿರಲಿ. ದಾರಿಯನ್ನು ಶುದ್ಧಮಾಡೋಣ. ಗುರಿ ತನ್ನನ್ನು ತಾನೇ ನೋಡಿಕೊಳ್ಳುವುದು. ನಮ್ಮ ಜೀವನ ಒಳ್ಳೆಯದಾಗಿದ್ದರೆ, ಶುದ್ಧ ವಾಗಿದ್ದರೆ, ಆಗಮಾತ್ರ ಜಗತ್ತು ಒಳ್ಳೆಯದಾಗುವುದು. ಶುದ್ಧವಾಗು ವುದು. ಇದೊಂದು ಪರಿಣಾಮ; ನಾವು ಅದಕ್ಕೆ ಕಾರಣ. ಮೊದಲು ನಾವು ಶುದ್ಧರಾಗೋಣ! ಪೂರ್ಣರಾಗೋಣ!

ಕೆಲವು ಕರ್ಮಯೋಗ ಭಾವನೆ

೧. ಕರ್ಮಯೋಗವೆಂದರೆ ನಿಮಗೆ ಈಗ ಗೊತ್ತಾಗುವುದು. ಸಾವೇ ಸಿದ್ಧವಾಗಿದ್ದರೂ, ಮತ್ತೊಂದು ಪ್ರಶ್ನೆಯನ್ನು ಎತ್ತದೆ ಸಹಾಯ ಮಾಡುವುದು. ಸಾವಿರಾರುವೇಳೆ ಮೋಸಹೋದರೂ ಮರುಪ್ರಶ್ನೆ ಹಾಕ ಕೂಡದು. ನೀವು ಏನನ್ನು ಮಾಡುತ್ತಿರುವಿರಿ ಎಂಬುದನ್ನು ಕುರಿತು ಆಲೋಚಿಸಕೂಡದು. ತೋರಿಕೆಗೆ ಯಾವ ಬಹುಮಾನವನ್ನೂ ದೀನರಿಗೆ ನೀಡಬೇಡಿ. ಅಥವಾ ಇವರಿಂದ ಯಾವ ಕೃತಜ್ಞತೆಯನ್ನೂ ಬಯಸಬೇಡಿ. ದಾನಮಾಡುವುದಕ್ಕೆ ಒಂದು ಸದವಕಾಶವನ್ನು ಒದಗಿಸಿಕೊಟ್ಟಿದಕ್ಕಾಗಿ ಅವರಿಗೆ ನೀವು ಕೃತಜ್ಞರಾಗಿರಬೇಕು.

೨. ಕರ್ಮಯೋಗವೆಂದರೇನು? ಕರ್ಮರಹಸ್ಯಜ್ಞಾನ. ಈ ಪ್ರಪಂಚದಲ್ಲಿ ತುಳಿಸಿಕೊಂಡು ಬಹಳ ನಿದಾನವಾಗಿ ಪೆಟ್ಟುತಿಂದಮೇಲೆ ಕಲಿತುಕೊಳ್ಳುವುದಕ್ಕಿಂತ ಕರ್ಮಯೋಗದ ಮೂಲಕ ಕರ್ಮರಹಸ್ಯವನ್ನು, ಕರ್ಮಮಾಡುವ ರೀತಿಯನ್ನು, ಕರ್ಮದ ವ್ಯವಸ್ಥಿತಸ್ಥಿತಿಯನ್ನು ಕಲಿತು ಕೊಳ್ಳುವೆವು.

೩. "ವಿರಾಮವಿಲ್ಲದೆ ಕರ್ಮದಲ್ಲಿ ನಿರತರಾಗಿ. ಆದರೆ ಕರ್ಮಕ್ಕೆ ಆಸಕ್ತರಾಗಬೇಡಿ." ಯಾವ ಕರ್ಮದೊಂದಿಗೂ ನಾನು ಮಾಡುತ್ತಿರು ವೆನು ಎಂಬ ಭಾವನೆಯನ್ನು ತಾಳಬೇಡಿ. ಮನಸ್ಸು ಸ್ವತಂತ್ರವಾಗಿರಲಿ. ನೀವು ನೋಡುವ ನೋವು ದುಃಖಗಳೆಲ್ಲ ಈ ಪ್ರಪಂಚದ ಆವಶ್ಯಕಸ್ಥಿತಿ. ಬಡತನ, ಐಶ್ವರ್ಯ, ಸಂತೋಷ ಎಲ್ಲ ಕ್ಷಣಿಕ. ಅವು ನಿಜವಾದ ನಮ್ಮ ಸ್ವಭಾವಕ್ಕೆ ಸೇರಿಲ್ಲ. ನಮ್ಮ ಸ್ವಭಾವ ಸುಖದುಃಖಗಳಾಚೆ ಇದೆ; ಇಂದ್ರಿಯ ವಿಷಯಗಳ ಆಚೆ ಇದೆ; ನಮ್ಮ ಕಲ್ಪನೆಗೆ ಅತೀತವಾಗಿದೆ. ಆದರೂ ನಾವು ಸರ್ವದಾ ಕರ್ಮದಲ್ಲಿ ನಿರತರಾಗಿರಬೇಕು. ದುಃಖ ಬರುವುದು ಆಸಕ್ತಿಯಿಂದ, ಕರ್ಮದಿಂದ ಅಲ್ಲ. ನಾವು ಮಾಡುವ ಕರ್ಮ ದೊಂದಿಗೆ ಐಕ್ಯತಾಭಾವವನ್ನು ತಾಳಿದೊಡನೆಯೆ ವ್ಯಸನಪಡುವೆವು. ಆದರೆ ನಾವು ಅದರೊಂದಿಗೆ ಐಕ್ಯತಾಭಾವನೆಯನ್ನು ತಾಳದೇ ಇದ್ದರೆ ಆ ದುಃಖ ನಮಗೆ ತಾಕುವುದಿಲ್ಲ.

೪. "ನಾನು ನನ್ನದೆ," ಎಲ್ಲಾ ದುಃಖಕ್ಕೂ ಕಾರಣ. ಒಡೆತನದ ಭಾವದೊಂದಿಗೆ ಸ್ವಾರ್ಥತೆ ಬರುವುದು. ಸ್ವಾರ್ಥತೆ ದುಃಖವನ್ನು ತರು ವುದು. ಪ್ರತಿಯೊಂದು ಸ್ವಾರ್ಥ ಆಲೋಚನೆ ಅಥವಾ ಕ್ರಿಯೆ ಯಾವು

ದಾದರೊಂದು ವಸ್ತುವಿಗೆ ನಮ್ಮನ್ನು ಆಸಕ್ತರಾಗುವಂತೆ ಮಾಡುವುದು. ತಕ್ಷಣವೇ ನಾವು ಗುಲಾಮರಾಗುವೆವು. "ನಾನು, ನನ್ನದು" ಎಂದು ಹೇಳುವ ಪ್ರತಿಯೊಂದು ಚಿತ್ತದ ಅಲೆಯೂ ನಮ್ಮನ್ನು ಬಂಧಿಸಿ ಗುಲಾಮರನ್ನಾಗಿ ಮಾಡುವುದು. ಹೆಚ್ಚು ನಾನು ನನ್ನದು ಎಂದು ಹೇಳಿಕೊಂಡಷ್ಟೂ ಗುಲಾಮಗಿರಿ ಹೆಚ್ಚುವುದು, ದುಃಖ ಹೆಚ್ಚುವುದು. ಆದ ಕಾರಣವೇ ಕರ್ಮಯೋಗ, ಪ್ರಪಂಚದಲ್ಲಿರುವ ಚಿತ್ರದ ಸೌಂದರ್ಯವನ್ನೆಲ್ಲ ಅನುಭವಿಸಿ, ಆದರೆ ಯಾವುದರೊಂದಿಗೂ ಒಡೆತನವನ್ನು ಇಟ್ಟುಕೊಳ್ಳಬೇಡಿ, ಎನ್ನುವುದು.

011211

೫. ಸ್ವಾರ್ಥತೆ ಎಂಬ ದೀರ್ಘಬಾಹುಗಳ ಚಾಚುವ ಸ್ವಭಾವವನ್ನು, ಮೊದಲು ನಾಶಮಾಡಿ ಎನ್ನುವುದು ಕರ್ಮಯೋಗ. ಅದನ್ನು ನಿಗ್ರಹಿಸುವ ಶಕ್ತಿ ಬಂದಮೇಲೆ, ಅದನ್ನು ಅಲ್ಲೆ ಬಿಗಿಹಿಡಿದು ಸ್ವಾರ್ಥವಾಗದಂತೆ ಮನಸ್ಸನ್ನು ತಡೆಯಿರಿ. ಆಗ ನೀವು ಹೊರಗೆ ಹೋಗಿ ಬೇಕಾದಷ್ಟು ಕರ್ಮಮಾಡಿ. ಎಲ್ಲದರಲ್ಲಿಯೂ ಬೆರೆಯಿರಿ. ನಿಮ್ಮ ಇಚ್ಛೆ ಬಂದೆಡೆ ಹೋಗಿ. ಪಾಪದಿಂದ ನೀವೆಂದೂ ಅಪವಿತ್ರವಾಗುವುದಿಲ್ಲ. ನೀರಿನಲ್ಲಿ ತಾವರೆಯ ಎಲೆ ಇದೆ. ನೀರು ಅದಕ್ಕೆ ಸೋಕಿ ಅಂಟಿಕೊಳ್ಳಲಾರದು. ನೀವೂ ಹಾಗೆ ಪ್ರಪಂಚದಲ್ಲಿ ಬಾಳಿ.

೬. ಅನಾಸಕ್ತಿ ಎಂದರೆ, ನಾವು ದೇಹಕ್ಕೆ ಏನನ್ನೋ ಹೊರಗೆ ಮಾಡುವುದಲ್ಲ. ಅದೆಲ್ಲ ಮನಸ್ಸಿನಲ್ಲಿ ಇದೆ. ದೇಹದೊಂದಿಗೆ, ಇಂದ್ರಿಯಗಳೊಂದಿಗೆ, ನಮ್ಮ ಸಂಬಂಧವಿಲ್ಲದೇ ಇದ್ದರೆ, ನಾವೆಲ್ಲಿದ್ದರೂ ಏನು ಮಾಡುತ್ತಿದ್ದರೂ ಅನಾಸಕ್ತರು. ಒಬ್ಬನು ಸಿಂಹಾಸನದ ಮೇಲಿರಬಹುದು. ಆದರೂ ನಿಸ್ಸಂಗನಾಗಿರಬಹುದು. ಒಬ್ಬ ಚಿಂದಿಬಟ್ಟೆಯನ್ನು ಹೊದ್ದಿರಬಹುದು. ಆದರೂ ಅವನು ಅತಿ ಆಸಕ್ತನಾಗಿರಬಹುದು. ಮೊದಲು ಮೊದಲು ಇಂತಹ ಅನಾಸಕ್ತಿ ಸ್ಥಿತಿಯನ್ನು ನಾವು ಪಡೆಯಬೇಕು. ನಂತರ ನಾವು ಅನವರತ ಕರ್ಮದಲ್ಲಿ ನಿರತರಾಗಿರಬಹುದು. ಕರ್ಮಯೋಗ ಎಷ್ಟೇ ಕಷ್ಟವಾದರೂ ನಮ್ಮ ಆಸಕ್ತಿಯನ್ನು ತೊರೆಯುವುದಕ್ಕೆ ಸಹಾಯ ಮಾಡುವ ಮಾರ್ಗವನ್ನು ಕೊಡುವುದು.

೭. ನಮ್ಮ ಆಸಕ್ತಿಯನ್ನು ತೊರೆಯುವುದಕ್ಕೆ ಎರಡು ಮಾರ್ಗಗಳಿವೆ. ಒಂದು ದೇವರಲ್ಲಿ ಅಥವಾ ಬಾಹ್ಯಸಹಾಯದಲ್ಲಿ ನಂಬದವರಿಗೆ. ಅವರು ತಮ್ಮ ಸಲಕರಣೆಯನ್ನು ತಾವೆ ಹೊಂದಿಸಿಕೊಳ್ಳಬೇಕಾಗಿದೆ. ತಮ್ಮ ಇಚ್ಛಾಶಕ್ತಿ ಮೂಲಕ ಅವರು ಕರ್ಮಮಾಡಬೇಕಾಗಿದೆ. ತಮ್ಮ ಮಾನಸಿಕ

ಶಕ್ತಿ ಮತ್ತು ವಿಮರ್ಶಾತ್ಮಕ ಬುದ್ಧಿಯಿಂದ ತಾವು ಅನಾಸಕ್ತರಾಗಿರಬೇಕೆಂದು ಕರ್ಮಮಾಡಬೇಕು. ಯಾರು ದೇವರಲ್ಲಿ ನಂಬುವರೊ ಅವರಿಗೆ ಮತ್ತೊಂದು ಮಾರ್ಗವಿದೆ. ಇದು ಅದಕ್ಕಿಂತ ಸುಲಭ. ದೇವರಿಗೆ ಕರ್ಮಫಲವನ್ನು ಸಮರ್ಪಿಸುವರು. ಅವರು ಕರ್ಮಮಾಡುವರು; ಆದರೆ ಫಲದಮೇಲೆ ಆಸಕ್ತಿಯಿಲ್ಲ. ಅವರು ನೋಡುವುದು, ಅನುಭವಿಸುವುದು, ಕೇಳುವುದು, ಮಾಡುವುದು ಎಲ್ಲಾ ದೇವರಿಗಾಗಿ, ನಾವು ಯಾವ ಸತ್ಕಾರ್ಯವನ್ನು ಮಾಡಿದರೂ, ಯಾವ ಪ್ರತಿಫಲವನ್ನೂ, ಹೊಗಳಿಕೆಯನ್ನೂ, ನಿರೀಕ್ಷಿಸಕೂಡದು. ಇದೆಲ್ಲ ಭಗವಂತನದು; ಕರ್ಮಫಲವನ್ನು ಆತನಿಗೆ ಸಮರ್ಪಿಸಿ.

೮. ಅಗ್ನಿಗೆ ಆಹುತಿಯನ್ನು ಸಮರ್ಪಿಸುವುದಕ್ಕಿಂತ ಹಗಲು ರಾತ್ರಿ ನಮ್ಮ ಅಹಂಕಾರ ಅರ್ಪಣೆಯ ಮಹಾಯಾಗವನ್ನು ಮಾಡಿ. "ಪ್ರಪಂಚದಲ್ಲಿ ಐಶ್ವರ್ಯವನ್ನು ಹುಡುಕುತ್ತಿರುವಾಗ, ನನಗೆ ಸಿಕ್ಕಿದ ಐಶ್ವರ್ಯ ನೀನೊಬ್ಬನೆ. ನನ್ನನ್ನು ನಿನಗೆ ಅರ್ಪಿಸುತ್ತೇನೆ." ಇದನ್ನು ದಿವಾರಾತ್ರಿ ಪಠಿಸುವ; "ನನಗೇನೂ ಬೇಡ. ಅದು ಒಳ್ಳೆಯದಾಗಲಿ, ಕೆಟ್ಟದಾಗಲಿ, ಪ್ರಯೋಜನಕ್ಕೆ ಬರದಿರಲಿ, ಅದನ್ನು ನಾನು ಲಕ್ಷಿಸುವುದಿಲ್ಲ. ನಿನಗೆ ನನ್ನ ಸರ್ವಸ್ವವನ್ನೂ ಅರ್ಪಿಸುವೆನು." ಹಗಲು ರಾತ್ರಿ ನಮ್ಮ ತೋರಿಕೆಯ ಅಹಂಕಾರವನ್ನು ತ್ಯಜಿಸುವ. ಹಾಗೆ ಮಾಡುವುದು ನಮ್ಮ ಸ್ವಭಾವವಾಗುವವರೆಗೆ, ಅದು ನಮ್ಮ ರಕ್ತಕ್ಕೆ, ನರಗಳಿಗೆ, ಮೆದುಳಿಗೆ ಪ್ರವೇಶಿಸಿ, ಪ್ರತಿಕ್ಷಣವೂ ಇಡೀ ನಮ್ಮ ಅಂಗಾಂಗವೂ ಆತ್ಮತ್ಯಾಗವೆಂಬ ಭಾವನೆಗೆ ದಾಸನಾಗುವವರೆಗೆ ಅಭ್ಯಾಸಮಾಡುವ. ನಂತರ ನೀವು ಸಮರಾಂಗಣಕ್ಕೆ ಬೇಕಾದರೆ ಹೋಗಿ; ಯುದ್ಧದ ಗಲಿಬಿಲಿಯಲ್ಲಿ ಕ್ಷಣ ಕ್ಷಣವೂ ಸಿಡಿಯುತ್ತಿರುವ ಮದ್ದುಗುಂಡುಗಳ ಘರ್ಜನೆಯಲ್ಲಿದ್ದರೂ, ನೀವು ಮುಕ್ತರಾಗಿ ಶಾಂತಚಿತ್ತರಾಗುವಿರಿ.

೯. ನಾನು ಕರ್ಮ ಮಾಡಬೇಕೆಂದು ಇಚ್ಛಿಸುವೆನು. ಮಾನವನಿಗೆ ಒಳ್ಳೆಯದನ್ನು ಮಾಡಬೇಕೆಂದು ಇಚ್ಛಿಸುವೆನು. ನಾನು ಸಹಾಯ ಮಾಡಿದ ತೊಂಬತ್ತು ಜನರಲ್ಲಿ ಒಬ್ಬನು ಉಪಕಾರ ಸ್ಮರಿಸುವುದಿಲ್ಲ. ನನಗೆ ವಿರೋಧವಾಗಿ ಹೋಗುವನು. ಇದರ ಪರಿಣಾಮವೆ ನನಗೆ ದುಃಖ. ಮನುಷ್ಯ ಕರ್ಮಮಾಡುವುದಕ್ಕೆ ಇದೊಂದು ಆತಂಕ; ಈ ನೋವಿನ ಮತ್ತು ದುಃಖದ ಅಂಜಿಕೆ ಕರ್ಮದ ಎಷ್ಟೋ ಭಾಗವನ್ನು, ಮನುಷ್ಯನ ಎಷ್ಟೋ ಶಕ್ತಿಯನ್ನು ವ್ಯಯಮಾಡುವುದು. ಕರ್ಮಕ್ಕೋಸುಗ

ಅನಾಸಕ್ತರಾಗಿ ಪ್ರತಿಫಲಾಪೇಕ್ಷೆ ಇಲ್ಲದೆ ಯಾರಿಗೆ ಸಹಾಯವಾಯಿತು, ಏತಕ್ಕೆ ಸಹಾಯವಾಯಿತು, ಎಂಬುದನ್ನು ಗಮನಿಸದೆ ಹೇಗೆ ದುಡಿಯುವುದೆಂಬುದನ್ನು ಕರ್ಮಯೋಗ ಬೋಧಿಸುವುದು. ಕರ್ಮಯೋಗಿ ಕೆಲಸ ಮಾಡುವನು; ಏತಕ್ಕೆಂದರೆ ಅದು ಅವನ ಸ್ವಭಾವ. ಹಾಗೆ ಮಾಡುವುದು ಒಳ್ಳೆಯದೆಂದು ಭಾವಿಸುವನು. ಇದರ ಆಚೆ ಅವನಿಗೆ ಏನೂ ಬೇಕಾಗಿಲ್ಲ. ಪ್ರಪಂಚದಲ್ಲಿ ಅವನ ಸ್ಥಿತಿ ದಾನಿಯದು. ಏನನ್ನೂ ಸ್ವೀಕರಿಸಲು ಅವನು ಇಚ್ಛಿಸುವುದಿಲ್ಲ. ತಾನು ಕೊಡುತ್ತಿರುವೆನೆಂದು ಅವನಿಗೆ ಗೊತ್ತಿದೆ. ಪ್ರತಿಫಲಾಪೇಕ್ಷೆಯನ್ನು ಎದುರುನೋಡುವುದಿಲ್ಲ. ಆದಕಾರಣ ಅವನು ದುಃಖದಿಂದ ಪಾರಾಗುವನು.

೧೦. ಎಲ್ಲಾ ಮಾನವರ ಸ್ವಭಾವವಾದ ಸ್ವಾತಂತ್ರ್ಯವನ್ನು ನಿಸ್ವಾರ್ಥಕರ್ಮದಿಂದ ಪಡೆಯುವುದೇ ಕರ್ಮಯೋಗ. ಪ್ರತಿಯೊಂದು ಸ್ವಾರ್ಥಕ್ರಿಯೆಯೂ ಗುರಿಸೇರುವುದನ್ನು ತಡೆಯುವುದು. ಪ್ರತಿಯೊಂದು ನಿಸ್ವಾರ್ಥಕ್ರಿಯೆಯೂ ಗುರಿಯೆಡೆಗೆ ನಮ್ಮನ್ನು ಒಯ್ಯುವುದು. ಆದಕಾರಣವೆ ಧರ್ಮಕ್ಕೆ ನಾವು ಕೊಡಬಹುದಾದ ಏಕಮಾತ್ರ ವಿವರಣೆಯೆ,- ಯಾವುದು ಸ್ವಾರ್ಥವೊ ಅದು ಅಧರ್ಮ, ಯಾವುದು ನಿಸ್ವಾರ್ಥವೋ ಅದು ಧರ್ಮ.

೧೧. ಕರ್ಮಯೋಗಿ ಯಾವ ಸಿದ್ಧಾಂತವನ್ನೂ ನಂಬಬೇಕಾದ ಅವಶ್ಯಕತೆ ಇಲ್ಲ. ಅವನು ದೇವರಲ್ಲೂ ನಂಬದಿರಬಹುದು, ತನ್ನ ಆತ್ಮವೆಂದರೇನೆಂಬುದನ್ನು ಪ್ರಶ್ನಿಸದೆ ಇರಬಹುದು, ಯಾವ ತಾತ್ತ್ವಿಕ ಊಹೆಯನ್ನೂ ಮಾಡದಿರಬಹುದು. ನಿಸ್ವಾರ್ಥತೆಯನ್ನು ಪಡೆಯುವ ಬೇರೆ ವಿಧಾನವೆ ಇರುವುದು. ಅದನ್ನು ತಾನೆ ಮಾಡಬೇಕಾಗಿದೆ. ಅವನ ಜೀವನದಲ್ಲಿ ಪ್ರತಿಕ್ಷಣವೂ ಇದನ್ನು ಅನುಭವಿಸಲೇ ಬೇಕು. ಅವನು ಕೇವಲ ಕರ್ಮದಿಂದ, ಸಿದ್ಧಾಂತಗಳ ಸಹಾಯವಿಲ್ಲದೆ, ಜ್ಞಾನಿ ತನ್ನ ಯುಕ್ತಿ ಮತ್ತು ಪ್ರತಿಭಾಶಕ್ತಿಯನ್ನು, ಭಕ್ತ ತನ್ನ ಪ್ರೀತಿಯನ್ನು ಉಪಯೋಗಿಸಿ ಯಾವ ಸಮಸ್ಯೆಯನ್ನು ಬಗೆಹರಿಸುವನೋ, ಇದನ್ನು ಇವನು ಕರ್ಮದಿಂದ ಸಾಧಿಸಬೇಕಾಗಿದೆ.

೧೨. ಪ್ರಪಂಚಕ್ಕೆ ಧುಮುಕಿ ಕರ್ಮರಹಸ್ಯವನ್ನು ತಿಳಿಯಿರಿ. ಇದೇ ಕರ್ಮಯೋಗದ ದಾರಿ. ಪ್ರಪಂಚದ ಮಹಾಯಂತ್ರದ ಗಾಲಿಗಳಿಂದ ಓಡಬೇಡಿ. ಅದರೊಳಗೆ ನಿಂತು ಅದರ ರಹಸ್ಯವನ್ನು ತಿಳಿಯಿರಿ. ಒಳಗೆ ಸರಿಯಾದ ಕರ್ಮವನ್ನು ಮಾಡಿದರೆ, ಅದರಿಂದ ಹೊರಬರಲು

ಸಾಧ್ಯ. ಈ ಯಂತ್ರದ ಮೂಲಕವಾಗಿಯೆ ನಾವು ಹೊರಗೆ ಬರುವುದಕ್ಕೆ ದಾರಿ ಇದೆ.

೧೩. ಸಾಧಾರಣ ಕೆಲಸದಮೇಲೆ ನಮಗೆ ಆಸಕ್ತಿ ಇಲ್ಲದೇ ಇದ್ದರೆ ನಾವು ಹೇಗೆ ಕರ್ಮಮಾಡಲು ಸಾಧ್ಯವೆಂಬುದನ್ನು ಹಲವುವೇಳೆ ಕೇಳಿರುವರು. ನಾನೂ ಕೆಲವು ವರ್ಷಗಳ ಹಿಂದೆ ಹಾಗೆ ಆಲೋಚಿಸಿದ್ದೆ. ನಾನು ಬೆಳೆದಂತೆ, ಹೆಚ್ಚು ಅನುಭವವನ್ನು ಪಡೆದಂತೆ, ಅದು ಸತ್ಯವಲ್ಲ ವೆಂದು ನನಗೆ ತೋರುವುದು. ಕಡಿಮೆ ಆಸಕ್ತಿ ಇದ್ದಷ್ಟೂ ನಾವು ಹೆಚ್ಚು ಕೆಲಸಮಾಡಬಲ್ಲೆವು. ಶಾಂತಚಿತ್ತರಾದಷ್ಟೂ ನಮಗೆ ಒಳ್ಳೆಯದು. ನಾವು ಹೆಚ್ಚು ಕೆಲಸವನ್ನು ಮಾಡಬಹುದು. ನಮ್ಮ ಉದ್ವೇಗವನ್ನು ಸುಮ್ಮನೆ ಹರಿಸಿದರೆ, ಅಷ್ಟೂ, ಶಕ್ತಿಯನ್ನು ವ್ರಯಮಾಡುವೆವು; ನರಗಳು ಬಲ ಗುಂದುವುವು; ಮನಸ್ಸು ಚಂಚಲವಾಗುವುದು. ಬಹಳ ಅಲ್ಪವನ್ನು ಮಾತ್ರ ನಾವು ಸಾಧಿಸಬಹುದು. ಯಾವ ಶಕ್ತಿ ಕರ್ಮರೂಪದಲ್ಲಿ ಹೊರ ಬರಬೇಕಾಗಿತ್ತೋ ಅದು ಕೇವಲ ವ್ಯರ್ಥ ಉದ್ವೇಗದಲ್ಲಿ ಕೊನೆಗಾಣು ವುದು. ಮನಸ್ಸು ಶಾಂತವಾಗಿ, ಏಕಾಗ್ರವಾದಾಗ ಮಾತ್ರ, ಅದರ ಶಕ್ತಿ ಯೆಲ್ಲಾ ಒಳ್ಳೆ ಕೆಲಸದಲ್ಲಿ ಉಪಯೋಗವಾಗುವುದು. ಪ್ರಪಂಚ ಜನ್ಮ ವಿತ್ತ ಮಹಾಕರ್ಮಿಗಳ ಜೀವನವನ್ನು ನೀವು ಓದಿದರೆ, ಅವರು ಅಸಾಧಾರಣ ಶಾಂತಚಿತ್ತರೆಂಬುದು ನಿಮಗೆ ಕಾಣುವುದು. ಯಾವುದೂ ಅವರನ್ನು ಸಮತ್ವದಿಂದ ಕೆಡಿಸಲು ಸಾಧ್ಯವಾಗುತ್ತಿರಲಿಲ್ಲ. ಆದಕಾರಣವೇ ಕೋಪಿಷ್ಠ ಎಂದಿಗೂ ಹೆಚ್ಚು ಕೆಲಸ ಮಾಡಲಾರ. ಯಾವುದೂ ಯಾರನ್ನು ಕೋಪಿಷ್ಠರಾಗಿ ಮಾಡಲಾರದೋ, ಅವರು ಹೆಚ್ಚು ಸಾಧಿಸುವರು. ಯಾರು ಕೋಪಕ್ಕೆ, ದ್ವೇಷಕ್ಕೆ, ಆಸೆಗೆ ತುತ್ತಾಗುವರೋ, ಅವರು ಕೆಲಸಮಾಡ ಲಾರರು; ಸುಮ್ಮನೇ ಅವರು ಹಾಳಾಗುವರು. ಸ್ಥಿರವಾಗಿ ಏನನ್ನೂ ಸಾಧಿಸಲಾರರು. ಶಾಂತಚಿತ್ತರು, ಕ್ಷಮಾಶೀಲರು, ಸಮಚಿತ್ತರು ಮಾತ್ರ ಹೆಚ್ಚು ಕಾರ್ಯವನ್ನು ಸಾಧಿಸಬಲ್ಲರು.

೧೪. ಕಮಲದೆಲೆಯಂತೆ ಮನುಷ್ಯ ಜಗದಲ್ಲಿ ಬಾಳಬೇಕು. ಅದು ನೀರಿನಲ್ಲಿ ಬೆಳೆಯುವುದು ಆದರೂ ನೀರಿಗೆ ಅಂಟುವುದಿಲ್ಲ. ಇದರಂತೆ ಮನುಷ್ಯ ಜಗತ್ತಿನಲ್ಲಿ ಇರಬೇಕು. ದೇವರಿಗೆ ಅವನ ಹೃದಯ ವನ್ನು ಅರ್ಪಿಸಬೇಕು, ಕರ್ಮಕ್ಕೆ ಅವನು ಕೈಗಳನ್ನು ಕೊಡಬೇಕು.

೧೫. ಮಾತಿನಿಂದ ಏನೂ ಪ್ರಯೋಜನವಿಲ್ಲ. ಅರಗಿಳಿಗಳು ಅದನ್ನು ಮಾಡಬಲ್ಲವು. ಅನಾಸಕ್ತ ಕರ್ಮದಿಂದ ಪರಿಪೂರ್ಣತೆ ಲಭಿಸುವುದು.

ಸೇವೆ

೧. ಪರಬ್ರಹ್ಮನಿಂದ ಹಿಡಿದು ಅತಿಕ್ಷುದ್ರಕ್ರಿಮಿಯವರೆಗೆ, ಸೂಕ್ಷ್ಮತಮ ಕಣವಂತರಾಳದಲ್ಲಿಯೂ, ಪ್ರೇಮಮಯನಾದ ಭಗವಂತನು ಸರ್ವಾಂತರ್ಯಾಮಿಯಾಗಿರುವನು. ಸಖನೆ! ಅವುಗಳಡಿದಾವರೆಯಲ್ಲಿ ಮನಸ್ಸು ಜೀವ, ದೇಹಗಳನ್ನು ಅರ್ಪಿಸು.

ನಿನ್ನ ಎದುರಿಗೆ ಇರುವ ಭಗವಂತನ ವಿಶ್ವರೂಪ ಇದು. ಇವುಗಳನ್ನು ತೊರೆದು ಮತ್ತೆಲ್ಲಿ ದೇವರನ್ನು ಅರಸುವೆ? ತಾರತಮ್ಯವಿಲ್ಲದೆ ಯಾರು ಎಲ್ಲರನ್ನೂ ಪ್ರೀತಿಸುವರೋ, ಆತನು ಮಾತ್ರ ತನ್ನ ಇಷ್ಟ ದೇವರನ್ನು ಅತ್ಯುತ್ತಮರೀತಿಯಿಂದ ಆರಾಧಿಸುತ್ತಿರುವನು.

೨. ಶುದ್ಧವಾಗಿರುವುದು, ಪರರಿಗೆ ಹಿತಮಾಡುವುದು–ಇದೇ ಎಲ್ಲಾ ಪೂಜೆಯ ಸಾರ. ದರಿದ್ರರಲ್ಲಿ, ದೀನರಲ್ಲಿ, ದುರ್ಬಲರಲ್ಲಿ ಯಾರು ಶಿವನನ್ನು ನೋಡುವರೋ, ಅವರೇ ನಿಜವಾಗಿ ಶಿವನನ್ನು ಆರಾಧಿಸುವರು. ಕೇವಲ ವಿಗ್ರಹದಲ್ಲಿ ಮಾತ್ರ ಶಿವನನ್ನು ನೋಡುವುದು ಭಗವದಾರಾಧನೆಗೆ ಪೀಠಿಕೆ ಮಾತ್ರ. ಯಾರು ಜಾತಿ ಕುಲ ಗೋತ್ರ ಜನಾಂಗವನ್ನು ಗಮನಿಸದೆ ಒಬ್ಬ ದೀನನಿಗೆ ಸಹಾಯಮಾಡಿರುವನೋ, ಸೇವಿಸಿರುವನೋ, ಅವನನ್ನು ಕಂಡರೆ ಶಿವನು, ತನ್ನನ್ನು ದೇಗುಲಗಳಲ್ಲಿ ಮಾತ್ರ ನೋಡುವವನಿಗಿಂತ ಹೆಚ್ಚು ಮೆಚ್ಚುವನು.

೩. ಯಾರು ತಂದೆಯನ್ನು ಸೇವಿಸಬೇಕೆಂದು ಬಯಸುವರೋ ಅವರು ಅವನ ಮಕ್ಕಳ ಸೇವೆಯನ್ನು ಮೊದಲುಮಾಡಬೇಕು. ಯಾರು ಶಿವನನ್ನು ಸೇವಿಸಬೇಕೆಂದು ಬಯಸುವರೊ, ಅವರು ಶಿವನ ಮಕ್ಕಳನ್ನು ಸೇವಿಸಬೇಕು.

೪. ಯಾರು ಭಗವಂತನ ಭಕ್ತರನ್ನು ಸೇವಿಸುವರೋ, ಅವರು ಭಗವಂತನ ಅತ್ಯುತ್ತಮ ಭಕ್ತರೆಂದು ಶಾಸ್ತ್ರಗಳು ಸಾರುತ್ತವೆ. ಇದನ್ನು ಜ್ಞಾಪಕದಲ್ಲಿಡಿ.

೫. ನಾನು ಪುನಃ ನಿಮಗೆ ಹೇಳುತ್ತೇನೆ ಕೇಳಿ; ನೀವು ಪರಿಶುದ್ಧರಾಗಿ. ಯಾರು ಸಹಾಯಕ್ಕಾಗಿ ನಿಮ್ಮಡಿಗೆ ಬರುವರೋ, ಸಾಧ್ಯವಾದಷ್ಟು ಅವರಿಗೆ ಸಹಾಯಮಾಡಿ. ಇದು ಒಳ್ಳೆಯ ಕರ್ಮ. ಇದರಿಂದ ಚಿತ್ತ ಶುದ್ಧಿಯಾಗುವುದು. ಸರ್ವರಲ್ಲಿಯೂ ನೆಲೆಸಿರುವ ಭಗವಂತ ವ್ಯಕ್ತವಾಗುವನು.

೬. ಮೊದಲು ನಮ್ಮ ಹಿತವನ್ನು ಕುರಿತು ಆಲೋಚಿಸುವ ಸ್ವಾರ್ಥತೆಯೇ ಮುಖ್ಯಪಾಪ. ಯಾರು "ಮೊದಲು ನಾನು ತಿನ್ನುತ್ತೇನೆ, ಇತರರಿಗಿಂತ ಹೆಚ್ಚು ಹಣವನ್ನು ಗಳಿಸುತ್ತೇನೆ, ಎಲ್ಲವನ್ನೂ ನಾನು ಪಡೆಯುತ್ತೇನೆ, ಉಳಿದವರಿಗಿಂತ ಮೊದಲು ನಾನು ಸ್ವರ್ಗಕ್ಕೆ ಹೋಗುವೆನು, ಮುಕ್ತಿ ಪಡೆಯುವೆನು" ಎಂದು ಯೋಚಿಸುವನೊ ಅವನು ಸ್ವಾರ್ಥಪರನು. ನಿಸ್ವಾರ್ಥಪರನು, "ನಾನು ಕೊನೆಗೆ ಉಳಿಯುತ್ತೇನೆ, ನನಗೆ ಸ್ವರ್ಗಲೋಕಕ್ಕೆ ಹೋಗುವುದಕ್ಕೂ ಇಚ್ಛೆ ಇಲ್ಲ. ನಾನು ನರಕಕ್ಕೆ ಹೋಗುವುದರಿಂದ ನನ್ನ ಸಹೋದರರಿಗೆ ಸಹಾಯವಾಗುವಂತೆ ಇದ್ದರೆ ನಾನು ಅದಕ್ಕೂ ಸಿದ್ಧವಿರುವೆನು.

೭. ಈ ಜೀವನ ಕ್ಷಣಿಕ; ಸುಖಭೋಗಗಳು ನಶ್ವರ. ಯಾರು ಪರರಿಗೋಸುಗ ಬಾಳುವರೋ ಅವರು ಬದುಕಿರುವರು, ಉಳಿದವರು ಬದುಕಿರುವುದಕ್ಕಿಂತ ಹೆಚ್ಚು ಸತ್ತಿರುವರು.

೮. ನೀವು ನಿಮ್ಮ ಸಹೋದರರನ್ನು ಪ್ರೀತಿಸುವಿರೇನು? ದೇವರನ್ನು ಅರಸಿಕೊಂಡು ನೀವೆಲ್ಲಿಗೆ ಹೋಗುವಿರಿ? ಕಣ್ಣೆದುರಿಗಿರುವ ದೀನರು, ದರಿದ್ರರು, ದುಃಖಿಗಳು ದೇವರಲ್ಲವೆ? ಮೊದಲು ಅವರನ್ನು ಏತಕ್ಕೆ ಪೂಜಿಸಬಾರದು? ಗಂಗಾನದಿಯ ತೀರದಲ್ಲಿ ಭಾವಿಯನ್ನು ತೋಡುವುದಕ್ಕೆ ಏತಕ್ಕೆ ಹೋಗುವಿರಿ?

೯. ಪ್ರಪಂಚಕ್ಕೆ ಯಾರು ಬೆಳಕನ್ನು ಕೊಡುವರು? ತ್ಯಾಗ ಹಿಂದೆ ನಿಯಮವಾಗಿತ್ತು. ಮುಂದೆಯೂ ಅದೇ ನಿಯಮವಾಗುವುದು. ಬಹುಜನರ ಹಿತಕ್ಕೆ ಬಹುಜನರ ಸುಖಕ್ಕೆ ಪ್ರಪಂಚದ ಶ್ರೇಷ್ಠತಮ ವ್ಯಕ್ತಿಗಳು, ಅತ್ಯದ್ಭುತ ವೀರರು ತಮ್ಮ ಬಾಳನ್ನು ಸಮರ್ಪಿಸಬೇಕು. ಎಂದಿಗೂ ಬತ್ತದ ರಾಷ್ಟ್ರೀಯ ಪ್ರೇಮ ವಿಶ್ವಕಾರುಣ್ಯದಿಂದ ತುಂಬಿ ತುಳುಕಾಡುವ ನೂರಾರು ಬುದ್ಧರು ಆವಶ್ಯಕ.

೧೦. ಪ್ರಪಂಚದ ಧರ್ಮಗಳು ನಗೆಗೀಡಾಗಿವೆ. ಪ್ರಪಂಚಕ್ಕೆ ಬೇಕಾಗಿರುವುದು ಘನತರದ ನಡತೆ. ಯಾರ ಜೀವನ ನಿಸ್ವಾರ್ಥ ಪ್ರೀತಿಯಿಂದ ಬೆಳಗುತ್ತಿದೆಯೋ, ಅಂತಹ, ವ್ಯಕ್ತಿಗಳು ಜಗತ್ತಿಗೆ ಬೇಕಾಗಿವೆ. ಅಂತಹ ಪ್ರೇಮದಿಂದಾಡಿದ ಪ್ರತಿಯೊಂದು ನುಡಿಯೂ ಸಿಡಿಲಿನಂತೆ ಪರಿಣಮಿಸುವುದು.

೧೧. ಮಹಾವ್ಯಕ್ತಿಗಳೆ, ಏಳಿ! ಜಾಗ್ರತರಾಗಿ! ದುಃಖದಿಂದ ದಹಿಸುತ್ತಿದೆ ಪ್ರಪಂಚ. ನೀವು ನಿದ್ರಿಸಬಲ್ಲಿರಾ? ನಿದ್ರಿಸುತ್ತಿರುವ ದೇವತೆ

ಗಳು ಜಾಗ್ರತರಾಗುವವರೆಗೆ ಮರಳಿ ಮರಳಿ ಕರೆಯೋಣ. ಆ ಕರೆಗೆ ಹೃದಯಾಂತರಗಳಲ್ಲಿರುವ ದೇವನ ಮಾರುತ್ತರ ಬರುವವರೆಗೂ ಕರೆಯೋಣ. ಜೀವನವಲ್ಲಿ ಇದಕ್ಕಿಂತ ಹೆಚ್ಚಿನದೇನಿದೆ? ಇದಕ್ಕಿಂತ ಸತ್ಕಾರ್ಯವೇನಿದೆ?

೧೨. ಪುನಪುನಃ ಜನ್ಮವೆತ್ತಲು ಸಿದ್ಧನಾಗಿರುವೆನು. ಸಾವಿರಾರು ಕಷ್ಟನಷ್ಟಗಳನ್ನು ಅನುಭವಿಸಲು ಸಿದ್ಧನಾಗಿರುವೆನು. ಇದರಿಂದ ಇರುವ ಒಬ್ಬನೇ ದೇವರನ್ನು, ನಾನು ನಂಬುವ ಒಬ್ಬನೇ ದೇವರನ್ನು, ಎಲ್ಲಾ ಜೀವಿಗಳ ಮೊತ್ತವನ್ನು, ಎಲ್ಲಕ್ಕಿಂತ ಮಿಗಿಲಾಗಿ, ದುರಾತ್ಮನಾದ ನನ್ನ ದೇವರನ್ನು, ದುಃಖಿಯಾದ ನನ್ನ ದೇವರನ್ನು, ಎಲ್ಲಾ ಜಾತಿಯ ಎಲ್ಲಾ ಜನಾಂಗದ ದೀನರಾದ ನನ್ನ ದೇವರನ್ನು ಪೂಜಿಸಬೇಕೆಂಬುದೇ ನನ್ನ ಪ್ರಾರ್ಥನೆಯ ಪರಮ ಗುರಿ.

೧೩. ದಯೆಯಿಂದ ಮತ್ತೊಬ್ಬರಿಗೆ ಹಿತವನ್ನು ಮಾಡುವುದು ಒಳ್ಳೆಯದು; ಆದರೆ ದೇವರೆಂದು ತಿಳಿದು ಎಲ್ಲರಿಗೂ ಸೇವೆಮಾಡುವುದು ಅತ್ಯುತ್ತಮ.

೧೪. ಮತ್ತೊಬ್ಬನಿಗೆ ದಯತೋರುವುದು ನಮಗೆ ಸಿಕ್ಕಿರುವ ಅವಕಾಶ. ನಾವು ವಿಕಾಸವಾಗುವುದೇ ಹೀಗೆ. ನಮಗೆ ಸಹಾಯ ವಾಗಲಿ ಎಂದು ದೇವನು ಕಷ್ಟವನ್ನು ಅನುಭವಿಸುವುದು. ಕೊಡುವವನು ಬಾಗಿ ಧನ್ಯವಾದವನ್ನು ಅರ್ಪಿಸಲಿ. ಸ್ವೀಕರಿಸುವವನು ಎದ್ದುನಿಂತು ಅದಕ್ಕೆ ಅವಕಾಶಕೊಡಲಿ. ಎಲ್ಲರಲ್ಲಿಯೂ ಭಗವಂತನನ್ನು ನೋಡಿ ಅವನಿಗೆ ಅರ್ಪಿಸಿ.

೧೫. ಕರ್ಮಮಾಡುವುದೇ ಧರ್ಮವಲ್ಲ. ಆದರೆ ಧಾರ್ಮಿಕವಾಗಿ ಕರ್ಮಮಾಡಿದರೆ ಮುಕ್ತಿಗೊಯ್ಯುವುದು. ಸತ್ಯವಾಗಿ ನೋಡಿದರೆ, ಮರುಕ ಅಜ್ಞಾನ; ಯಾರಿಗೆ ನಾವು ಮರುಗಬಲ್ಲೆವು? ನೀವು ದೇವರಿಗೆ ಮರುಗುವಿರಾ? ದೇವರಲ್ಲದೆ ಬೇರೆ ಯಾವುದಾದರೂ ಇರುವುದೆ? ನಿಮ್ಮ ಆತ್ಮವಿಕಾಸಕ್ಕೆ ಪ್ರಪಂಚವೆಂಬ ಗರಡಿಯ ಮನೆಯನ್ನು ಕೊಟ್ಟುದಕ್ಕಾಗಿ ದೇವರಿಗೆ ಧನ್ಯವಾದವನ್ನು ಅರ್ಪಿಸಿ. ಆದರೆ ಪ್ರಪಂಚಕ್ಕೆ ಉಪಕಾರ ಮಾಡುವೆನು ಎಂದು ಎಂದಿಗೂ ಭ್ರಾಂತರಾಗಬೇಡಿ.

೧೬. ಆತ್ಮಪ್ರತಿಷ್ಠೆಯಲ್ಲ, ಆತ್ಮತ್ಯಾಗ, ಪ್ರಪಂಚದ ಅತ್ಯುತ್ತಮ ಧರ್ಮ.

೧೭. ಧರ್ಮ ತೀವ್ರಆತ್ಮತ್ಯಾಗದಿಂದ ಬರುವುದು.

೧೮. ಏನನ್ನೂ ನಿಮಗಾಗಿ ಇಚ್ಛಿಸಬೇಡಿ. ಎಲ್ಲವನ್ನೂ ಇತರರಿಗೆ

ಮಾಡಿ. ಇದೇ ದೇವರಲ್ಲಿ ಬಾಳುವುದು, ಅವನಲ್ಲಿ ಚಲಿಸುವುದು, ಅವನನ್ನು ಹೊಂದುವುದು.

೧೯. ಸ್ವಾರ್ಥತೆಯೇ ಪ್ರತಿಯೊಬ್ಬನಲ್ಲಿಯೂ ಇರುವ ಪಿಶಾಚಿ. ಅದರ ಪ್ರತಿಯೊಂದು ಅಂಶವೂ ಪೈಶಾಚಿಕ. ಒಂದು ಕಡೆಯಿಂದ ಸ್ವಾರ್ಥತೆಯನ್ನು ದೂಡಿದರೆ ಮತ್ತೊಂದು ಕಡೆಯಿಂದ ಭಗವಂತ ಪ್ರವೇಶಿಸುವನು.

೨೦. ಪರಮಾದರ್ಶವೇ ಆದ್ಯಂತರಹಿತ ಪೂರ್ಣತ್ಯಾಗ. ಅಲ್ಲಿ ನಾನೆಂಬುದಿಲ್ಲ. ಎಲ್ಲಾ ನೀನು.

೨೧. ನಿಸ್ವಾರ್ಥತೆಯೇ ದೇವರು.

೨೨. ನೀನು ನಿಸ್ವಾರ್ಥಪರನೇ? ಅದೇ ಪ್ರಶ್ನೆ. ನೀನು ನಿಸ್ವಾರ್ಥಪರನಾದರೆ, ಯಾವ ಒಂದು ಧಾರ್ಮಿಕಗ್ರಂಥವನ್ನು ಓದದೇ, ಯಾವ ಒಂದು ಚರ್ಚು ಅಥವಾ ದೇವಸ್ಥಾನಕ್ಕೆ ಹೋಗದೇ, ನೀನು ಪೂರ್ಣನಾಗಬಲ್ಲೆ.

೨೩. ದೇವರಿಗೂ ಸೈತಾನನಿಗೂ ಇರುವ ವ್ಯತ್ಯಾಸವೇ, ಸ್ವಾರ್ಥತೆ ಮತ್ತು ನಿಸ್ವಾರ್ಥತೆಯಲ್ಲದೆ ಬೇರೆ ಇಲ್ಲ.

೨೪. ಮಾನವಕೋಟಿಯನ್ನು ಸೇವಿಸುವುದೊಂದು ದೊಡ್ಡ ಪುಣ್ಯ. ಇದೇ ದೇವರ ಪೂಜೆ. ಪ್ರತಿಯೊಂದು ಜೀವಿಯಲ್ಲಿಯೂ ದೇವರಿರುವನು. ಮಾನವನ ಆತ್ಮನೇ ಅವನು.

೨೫. ನೀವು ಉಪಕಾರಮಾಡುವ ಮನುಷ್ಯರಿಗೆ ಕೃತಜ್ಞರಾಗಿ, ಅವರನ್ನು ದೇವರೆಂದು ಭಾವಿಸಿ. ನಿಮ್ಮ ಸಹೋದರರಿಗೆ ಉಪಕಾರ ಮಾಡುವುದರ ಮೂಲಕ, ಭಗವಂತನನ್ನು ಪೂಜಿಸಲು ನಿಮಗೆ ಸಿಕ್ಕಿರುವ ಅವಕಾಶ ಒಂದು ಪುಣ್ಯವಲ್ಲವೆ?

೨೬. ಪ್ರಪಂಚ ಒಂದು ಅಮೋಘವಾದ ನೈತಿಕ ಗರಡಿಯಮನೆ. ಹೆಚ್ಚುಹೆಚ್ಚು ಧರ್ಮದಲ್ಲಿ ಬಲಾಢ್ಯರಾಗುವುದಕ್ಕೆ ನಾವುಗಳೆಲ್ಲ ಇಲ್ಲಿ ಶಿಕ್ಷಣವನ್ನು ಪಡೆಯಬೇಕಾಗಿದೆ.

೨೭. ಪ್ರತಿಯೊಂದು ಪ್ರಥಮ ಫಲವೂ ದೀನರಿಗೆ ಹೋಗಬೇಕು. ಉಳಿದುದಕ್ಕೆ ಮಾತ್ರ ನಮಗೆ ಹಕ್ಕಿರುವುದು. ದೀನರು ಭಗವಂತನ ಪ್ರತಿನಿಧಿಗಳು; ಕಷ್ಟಪಡುವವರೆಲ್ಲ ಅವನ ಪ್ರತಿನಿಧಿಗಳು.

ಕನ್ನಡ ವಿಶ್ವ ವಿದ್ಯಾಲಯ
ಗ್ರಂಥಾಲಯ
ಹಂಪಿ— ಕಮಲಾಪುರ

ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ - ಹಂಪಿ
ವಿದ್ಯಾರಣ್ಯ

ಪರಿಗ್ರಹಣ ಸಂಖ್ಯೆ:

ವರ್ಗೀಕರಣ ಸಂಖ್ಯೆ:

ಪುಸ್ತಕವನ್ನು ಕೊನೆಯಲ್ಲಿ ನಮೂದಿಸಲಾಗಿರುವ ದಿನದಂದು ಅಥವಾ ಅದಕ್ಕೆ ಮುನ್ನ ಹಿಂದಿರುಗಿಸಬೇಕು. ತಡವಾದ ಪ್ರತಿದಿನಕ್ಕೆ ನಿಯಮಾನುಸಾರ ದಂಡ ಶುಲ್ಕ ವಿಧಿಸಲಾಗುವುದು.